# ಮೆಸ್ಸಿಯನು

● ಎಲ್. ಎಂ. ಅಬ್ದುಲ್ಲಾ

*Published by :*

**FREE FELLOWSHIP OF PENTECOSTAL CHURCHES IN KARNATAKA.**

"MESSIAH" by : L. M. Abdalla
Translated to Kannada by Franklynn Jayaraj.

ಮೊದಲ ಮುದ್ರಣ - 2004
ಪ್ರತಿಗಳು 11,000

*Published by :*

**FREE FELLOWSHIP OF PENTECOSTAL CHURCHES IN KARNATAKA.**

ಮುದ್ರಣ :

ಶೃತಿ ಪ್ರಕಾಶನ, ಲವೀನಾ ಆಫ್‌ಸೆಟ್ ಪ್ರಿಂಟರ್ಸ್, ಕಟಪಾಡಿ - 574 105.

ದೂರವಾಣಿ : (0820) 2578299, 2578222

# ಮೊದಲ ಮಾತು

ಶ್ರೀಯುತ ಎಲ್. ಎಮ್. ಅಬ್ದುಲ್ಲಾ ಇವರು ಬರೆದ 'ಮೆಸ್ಸಿಯ' ಎಂಬ ಕಿರು ಹೊತ್ತಿಗೆಯನ್ನು ಪ್ರಕಟಪಡಿಸಲು ಕೃಪೆ ನೀಡಿದ ದೇವರಿಗೆ ಸ್ತೋತ್ರ. ಈ ಕಿರು ಹೊತ್ತಿಗೆಯನ್ನು ಓದುವ ಪ್ರತಿಯೊಬ್ಬರು ಮೆಸ್ಸಿಯನ ಕುರಿತು ತಿಳುವಳಿಕೆಯನ್ನು ಹೊಂದಿ ನಿತ್ಯಜೀವದ ನಿರೀಕ್ಷೆಯನ್ನು ಹೊಂದುವಂತಾಗಲಿ ಎಂದು ಪ್ರಾರ್ಥನಾ ಪೂರ್ವಕವಾಗಿ ಇದನ್ನು ಸಮರ್ಪಿಸುತ್ತಿದ್ದೇನೆ.

ಈ ಪುಸ್ತಕವನ್ನು ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಿ ಕೊಟ್ಟ ಶ್ರೀ ಫ್ರಾಂಕ್ಲಿನ್ ಜಯರಾಜ್ (ಬಾನುಲಿ ಅಣ್ಣಯ್ಯ) ಇವರಿಗೂ ಹಾಗೂ ಅಂದವಾಗಿ ಇದನ್ನು ಮುದ್ರಿಸಿಕೊಟ್ಟ ಶ್ರುತಿ ಪ್ರಕಾಶನ, ಲವೀನಾ ಆಫ್‌ಸೆಟ್ ಪ್ರಿಂಟರ್ಸ್, ಕಟಪಾಡಿ ಇವರಿಗೂ ನಾನು ನನ್ನ ಕೃತಜ್ಞತೆಯನ್ನು ಹೇಳಲು ಸಂತೋಷಪಡುತ್ತೇನೆ.

ಎಫ್. ಎಫ್. ಪಿ. ಸಿ. ಕೆ.ಯ ಪರವಾಗಿ,

ಉಡುಪಿ
20-11-2004

**ಪಾಸ್ಟರ್ ಜೋಸೆಫ್ ಜಮಖಂಡಿ**

*ಒಳಪುಟಗಳಲ್ಲಿ.......*


| | | |
|---|---|---|
| * | ಅಹಮದ್ ಮತ್ತು ಕಾಸಿಮ್ | 1 |
| * | ದೇವರ ಕುರಿಮರಿ | 3 |
| * | ದೇವರ ವಾಕ್ಯ | 7 |
| * | ದೇವರ ಬಲಿಯಜ್ಞ | 10 |
| * | ಪಾಪ | 15 |
| * | ಅಬ್ರಹಾಮನ ಮಗ | 21 |
| * | ದೇವರು ಒಬ್ಬನೇ | 27 |
| * | ದೇವರು ಮತ್ತು ಮಾನವ | 34 |

# ಅಹಮದ್ ಮತ್ತು ಕಾಸಿಮ್

ಅಹಮದನು ಒಂದು ಕಛೇರಿಯಲ್ಲಿ ಉದ್ಯೋಗ ಮಾಡುತ್ತಿದ್ದನು. ಅವನೇನೂ ತನ್ನ ಕೆಲಸದಲ್ಲಿ ಅಸಂತುಷ್ಟನಾಗಿದ್ದನೆಂದೇನೂ ಇರಲಿಲ್ಲ. ಆದರೆ ಅವನು ಕೆಲಸ ಮಾಡುತ್ತಿದ್ದ ವಿಭಾಗದ ಮುಖ್ಯಸ್ಥನೊಂದಿಗೆ ಹೊಂದಾಣಿಕೆಯ ಅಭಾವವಿತ್ತು. ಯಾಕೆಂದರೆ ಅಹಮದನಿಗೆ ತನ್ನ ಕೆಲಸದ ದಕ್ಷತೆಯನ್ನು ನಿರೂಪಿಸುವ ಅವಕಾಶ ಸಿಗುತ್ತಿರಲಿಲ್ಲ. ಬಹು ಕಷ್ಟಕರವಾದ ಕೆಲಸವೇನಾದರೂ ಆ ವಿಭಾಗಕ್ಕೆ ನೇಮಕಗೊಂಡರೆ, ಅದನ್ನು ಮಾಡಿದ ಹೆಗ್ಗಳಿಕೆಯನ್ನು ಆ ಮುಖ್ಯಸ್ಥನೇ ಪಡೆಯಲು ಮುಂದಾಗುತ್ತಿದ್ದನು.

ಅನೇಕ ವೇಳೆ ಅಹಮದನು ತನ್ನ ಉದ್ಯೋಗವನ್ನು ಬದಲಿಸಲು ಯೋಚಿಸಿದನು. ಆದರೆ ಉದ್ಯೋಗದ ನಿರೀಕ್ಷಣೆ ಅಷ್ಟೊಂದು ಉತ್ತೇಜನಕಾರಿಯಾಗಿರಲಿಲ್ಲ. ಉತ್ತಮವಾದ ಉದ್ಯೋಗಗಳು ದೊರಕುವುದು ಬಹು ಕಷ್ಟಸಾಧ್ಯವಾಗಿತ್ತು. ಒಂದು ವೇಳೆ ಸಿಗಬಹುದಾದಂತ ಬೇರೆ ಉದ್ಯೋಗಗಳಿಗಿಂತ ಈಗಿನ ಸಂಬಳದ ಮೊತ್ತವೂ ಹೆಚ್ಚಾಗಿತ್ತು. ಆದುದರಿಂದ ಅಹಮದನು ಇದ್ದ ಸಂಸ್ಥೆಯಲ್ಲೇ ಮುಂದುವರಿಯುತ್ತಿದ್ದನು. ತನ್ನ ಹೆಂಡತಿ ಮತ್ತು ಮೂರು ಮಕ್ಕಳ ಪೋಷಣೆಯ ಅವಶ್ಯಕತೆಯ ದೃಷ್ಟಿಯಿಂದ ಹಣದ ಸ್ಥಾನ ಬಹಳ ಮುಖ್ಯವಾದದ್ದಾಗಿದ್ದಿತು. ತನ್ನ ಮಕ್ಕಳ ಕುರಿತು ಅದರಲ್ಲೂ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ತನ್ನ ಚೊಚ್ಚಲ ಮಗ ಹಸ್ಸನ್ ವಿಷಯದಲ್ಲಿ ಅವನಿಗೆ ಬಹಳ ಹೆಮ್ಮೆ ಇತ್ತು.

ಒಂದು ದಿನ ಪರಿಸ್ಥಿತಿ ಬದಲಾಗಿ ಉತ್ತಮವಾಗುವಂತ ಒಂದು ಘಟನೆ ನಡೆಯಿತು. ಅಹಮದ್ ಇದ್ದ ವಿಭಾಗಕ್ಕೆ ಕಾಸಿಮ್ ಸೇರಿದನು. ಈ ಕಾಸಿಮ್ ಅಹಮದನಿಗಿಂತಲೂ ಸ್ವಲ್ಪ ಕಿರಿಯವನಾಗಿದ್ದು ಯಾವಾಗಲೂ ಒಳ್ಳೇ ಮನೋಭಾವದಿಂದಲೂ, ಹಸನ್ಮುಖದಿಂದಲೂ ಎಲ್ಲರೊಡನೆ ಬಹು ಸುಲಭವಾಗಿ ಹೊಂದಿಕೊಳ್ಳುವವನೂ ಆಗಿದ್ದನು. ಅಂತೂ ಕೊನೆಗೆ ಅಹಮದನಿಗೆ ಕೆಲಸದಲ್ಲಿ ಒಬ್ಬ ಸ್ನೇಹಿತನು ದೊರಕಿದನು. ಅವರು ಮಧ್ಯಾಹ್ನದಲ್ಲಿ ಒಟ್ಟಾಗಿ ಊಟ ಮಾಡುವವರಾಗಿ, ಸಂಜೆ ಒಟ್ಟಿಗೆ ಕಳೆಯುವವರಾದರು. ಕಾಸಿಮ್ ಕೂಡಾ ವಿವಾಹಿತನಾಗಿದ್ದು, ದೇವರು ಅವನಿಗೆ ಮುದ್ದಾದ ನಾಲ್ಕು ಮಕ್ಕಳನ್ನು ಅನುಗ್ರಹಿಸಿದ್ದನು. ಎರಡು ಗಂಡು; ಎರಡು ಹೆಣ್ಣು ಮಕ್ಕಳು.

ಅಹಮದನೂ ಕಾಸಿಮನೂ ಬಹು ಒಳ್ಳೇ ಸ್ನೇಹಿತರಾಗಿ ಆಗಾಗ್ಗೆ ಅವರು ಒಬ್ಬರ ಮನೆಗೊಬ್ಬರು ಭೇಟಿ ಕೊಡುತ್ತಿದ್ದರು. ಅವರು ಕುಳಿತು ಚಾ ಕುಡಿಯುತ್ತಾ ಮಾತಾಡುವ ಸಮಯವನ್ನು ಇಷ್ಟಪಡುತ್ತಿದ್ದರು. ಸಮಯವು ಹಾರಿ ಹೋಗುವುದನ್ನೂ ಗಮನಿಸದೆ ಹಲವಾರು ವಿಷಯಗಳ ಕುರಿತು ಚರ್ಚೆ ನಡಿಸುತ್ತಿದ್ದರು.

ಪ್ರಾರಂಭದ ದಿನಗಳಲ್ಲಿ ಅವರು ತಮ್ಮ ಕಛೇರಿಯ ಕೆಲಸಗಳ ಕುರಿತು ಮಾತಾಡುತ್ತಿದ್ದರು. ಹಾಗೇ ಕೆಲವು ಕಾಲದನಂತರ ಜೀವಿತದ ಪ್ರಾಮುಖ್ಯ ಅಂಶಗಳ ಕುರಿತು ಮಾತಾಡಲು ಪ್ರಾರಂಭಿಸಿದರು. ಅಹಮದನೂ ಕಾಸಿಮನೂ ತಮ್ಮ ಧಾರ್ಮಿಕತೆಯ ಕುರಿತು ಬಹು ಆಳವಾದ ನಿಷ್ಠೆಯುಳ್ಳವರಾಗಿದ್ದರು. ಆದರೆ ಅವರಿಬ್ಬರಲ್ಲೂ ಒಂದೇ ತೆರನಾದ ನಂಬಿಕೆಯಿರಲಿಲ್ಲ. ಅಹಮದನು ಮುಸ್ಲಿಮನಾಗಿದ್ದನು. ಆದರೆ ಅವನ ಆತ್ಮೀಯ ಗೆಳೆಯನಾದ ಕಾಸಿಮ್ ಸತ್ಯವೇದವನ್ನು ಕ್ರಮವಾಗಿ ಓದುತ್ತಾ ಇದ್ದವನಾಗಿ ಮೆಸ್ಸೀಯನ ಹಿಂಬಾಲಕನಾಗಿದ್ದನು. (ಅಲ್-ಮೆಸ್ಸಿ)

ಅಹಮದನಿಗೆ ಬಹು ಆಶ್ಚರ್ಯಕರವಾದದ್ದೇನಂದರೆ ಹೆಚ್ಚೆಚ್ಚು ಕಾಸಿಮನನ್ನು ತಿಳುಕೊಳ್ಳುವಾಗ ಹೆಚ್ಚೆಚ್ಚು ಅವನ ನಂಬಿಕೆಗೆ ಹಾಗೂ ದೇವರೊಟ್ಟಿಗಿನ ಅವನ ಜೀವಿತಕ್ಕೆ ತಾನು ಗೌರವ ಕೊಡಲು ಪ್ರಾರಂಭಿಸಿರುವುದೇ ಆಗಿತ್ತು. ತಾನೆಂದೂ ಆ ರೀತಿಯ ಅನುಭವ ಹೊಂದಿರದ ದೇವರೊಟ್ಟಿಗಿನ ಸಂತೋಷವನ್ನು ತನ್ನ ಗೆಳೆಯ ಹೊಂದಿರುವುದನ್ನು ನೋಡಿ ಅಹಮದನ ಕುತೂಹಲ ಕೆರಳಿತು. ಕಾಸಿಮ್‌ನ ಜೀವನ ದೇವರೊಂದಿಗಿತ್ತು. ಮೆಸ್ಸೀಯನ ಕುರಿತು ಏನಾದರೂ ಮಾಡಬೇಕೆಂದು ಅಹಮದನು ಯೋಚಿಸಿದನು. ಒಂದು ಅರ್ಥದಲ್ಲಿ ಅಹಮದನೂ ಮೆಸ್ಸೀಯನ ಮೇಲೆ ನಂಬಿಕೆಯಿಟ್ಟಿದ್ದನು. ಆದರೆ ಕಾಸಿಮ್ ಇಟ್ಟ ರೀತಿಯಂತಲ್ಲ. ಮರಿಯಳ ಮಗನಾದ (ಯೇಸುವಿನ ಕುರಿತು ಖುರಾನಿನಲ್ಲಿ ಬರೆದದ್ದನ್ನು ಸಂಪೂರ್ಣವಾಗಿ ನಂಬಿದ್ದನು. ಮತ್ತು ಮೆಸ್ಸೀಯನ ಕುರಿತು ಬಹು ಆಳವಾದ ಗೌರವವನ್ನಿಟ್ಟಿದ್ದನು. ಮೆಸ್ಸೀಯನು ಕನ್ಯಾಮರಿಯಳ ಗರ್ಭದಲ್ಲಿ (ಮರಿಯಮ್ ಅಲ್-ಅತ್ರಾ) ಹುಟ್ಟಿದನೆಂದೂ, ದೇವರ ಅಪ್ಪಣೆಗನುಸಾರ ಅನೇಕ ಅದ್ಭುತಕಾರ್ಯಗಳನ್ನು ಮಾಡಿದನೆಂದೂ, ಆತನು ದೇವರಿಂದ ಸುವಾರ್ತೆ (ಅಲ್-ಇಂಜಿಲ್) ಹೊಂದಿದನೆಂದೂ ನಂಬಿದ್ದನು. ಅದೇ ಸಮಯದಲ್ಲಿ ತಾನು ಈ ಮೆಸ್ಸೀಯನ ಜೀವಿತದ ಕುರಿತು ಬಹು ಸ್ವಲ್ಪ ಮಾತ್ರವೇ ವಿವರಗಳನ್ನು ತಿಳುಕೊಂಡಿದ್ದೇನೆಂದೂ ಅಹಮದನು ತಿಳಿದವನಾಗಿದ್ದನು. ಈ ಶ್ರೇಷ್ಟ ಅಪೋಸ್ತಲ (ರಸೂಲ್)ನ ಕುರಿತು ಹೆಚ್ಚು ತಿಳಿಯಬೇಕೆಂದು ಅವನಲ್ಲಿ ಆಸೆ ಬೆಳೆಯಿತು. ಯಾಕೆಂದರೆ ಆತನಿಗೆ ಖುರಾನಿನಲ್ಲೂ ಅನೇಕ ಹೆಸರುಗಳು ಕೊಡಲ್ಪಟ್ಟಿತ್ತು.

ಒಂದು ದಿನ ಅಹಮದನು ಈ ಕುತೂಹಲ ತಡೆಯಲಾರದೇ ಮೆಸ್ಸೀಯನ ಕುರಿತು ತನ್ನ ಆತ್ಮೀಯ ಗೆಳೆಯ ಕಾಸಿಮ್ ಹತ್ತಿರ ಚರ್ಚಿಸಲು ನಿರ್ಧರಿಸಿದನು. ಈ ನಿರ್ಧಾರ ಅನೇಕ ಆಸಕ್ತಿಯುತ ಚರ್ಚೆಗೆ ಮಾರ್ಗವಾಯಿತು.

## ದೇವರ ಕುರಿಮರಿ

"ಮರಿಯಳ ಮಗನಾದ ಯೇಸುವಿನ ವಿಷಯ ಹೇಳು. ಆತನ ವಿಷಯ ನನಗೆ ಇನ್ನೂ ತಿಳಿಯಲು ಆಪೇಕ್ಷೆಯುಂಟಾಗಿದೆ" ಎಂದು ಅಹಮದ್ ಕೇಳಿಕೊಂಡನು.

ಕಾಸಿಮ್ ಸ್ವಲ್ಪ ಸಮಯ ಯೋಚಿಸಿ "ಈ ಲೋಕಕ್ಕೆ ಮೆಸ್ಸೀಯನು ಯಾಕೆ ಬಂದನು ಎಂದು ತಿಳಿಯುವ ಮೊದಲು ನೀನು ಬಲಿಯಜ್ಞ ಅರ್ಥ ತಿಳಿಯ ಬೇಕಾಗುತ್ತದೆ".

"ಬಲಿಯಜ್ಞ! ಹಾಗೆಂದರೇನು?" ಆಶ್ಚರ್ಯಚಕಿತನಾಗಿ ಅಹಮದ್ ಕೇಳಿದನು.

ಕಾಸಿಮ್ ಉತ್ತರಿಸುತ್ತಾ "ನಾವು ಬಲಿಯಜ್ಞ ಅರ್ಥವನ್ನು 'ಈದ್-ಅಲ್ ಅಧ್ಹಾ' (ಬಲಿಯಜ್ಞ ಹಬ್ಬ)ದಲ್ಲಿ ಕಾಣಬಹುದು. ದೇವರು ಅಬ್ರಹಾಮನಿಗೆ (ಸಈದ್ನಾ ಇಬ್ರಾಹಿಂ) ಅವನ ಮಗನನ್ನು ಬಲಿಯಜ್ಞವನ್ನಾಗಿ ಸಮರ್ಪಿಸು ಎಂದಾಗ, ದೇವರು (ಅಲ್ಲಾಹ್) ಅವನ ಬದಲನ್ನು (ಫಿದಾ) ಕೊಡಲಿಲ್ಲವಾಗಿದ್ದಲ್ಲಿ ಏನಾಗುತ್ತಿತ್ತೆಂದು ನೀನು ಯೋಚಿಸು".

"ಇಷ್ಮಾಯೆಲ್ ಸತ್ತು ಹೋಗಬೇಕಿತ್ತು" ಅಹಮದ್‌ನ ಉತ್ತರ.

"ಬಲಿಯಜ್ಞ ಎಂದರೆ ಅದೇ. ಒಬ್ಬರು ಇನ್ನೊಬ್ಬರಿಗಾಗಿ ಸಾಯುವುದು. ದೇವರು ಒಂದು ಟಗರನ್ನು ಅವನ ಬದಲಿಗೆ ಬಲಿಯಜ್ಞವಾಗಿ ಒದಗಿಸಿದನು. ನಾನೂ ಅಬ್ರಹಾಮನ ಮಗನ ಸ್ಥಾನದಲ್ಲಿ ಇದ್ದೇನೆ. ನಾನು ಮರಣದ ಶಕ್ತಿಯೊಳಗಿದ್ದೇನೆ" ಕಾಸಿಮ್ ಸವಿಸ್ತಾರವಾಗಿ ಹೇಳಿದನು.

"ಹಾಗಂದರೇನರ್ಥ?" ಕಳವಳದ ಧ್ವನಿಯಲ್ಲಿ ಅಹಮದ್ ಕೇಳಿದನು.

ಆದರೆ ಗಂಭೀರ ಧ್ವನಿಯಲ್ಲಿ ಕಾಸಿಮ್ ಉತ್ತರಿಸುತ್ತಾ "ಅದು ಬೈಬಲ್ (ಪರಿಶುದ್ಧ ಪುಸ್ತಕ)ನಲ್ಲಿ ಬರೆಯಲ್ಪಟ್ಟಿದೆ."

*ಪಾಪದ ಸಂಬಳ ಮರಣ* (1)

"ನನ್ನ ಪಾಪದ ಸಂಬಳ ಮರಣ. ನಾನು ಒಬ್ಬ ಪಾಪಿ. ಹೌದು! ಇತರರು ನಾನೊಬ್ಬ ಯಥಾರ್ಥ ಮತಾಸಕ್ತನೆಂದು ಎಣಿಸುತ್ತಾರೆ. ನಾನು ದೇವರಿಗೆ ಪ್ರತೀ ದಿನ ಪ್ರಾರ್ಥಿಸುತ್ತೇನೆ. ನಾನು ಆತನ ಪುಸ್ತಕವನ್ನು ಓದುತ್ತೇನೆ. ಆತನ ಸೇವೆ ಮಾಡುತ್ತೇನೆ. ಆದರೆ ದೇವರ ಮುಂದೆ ನಾನು ಒಬ್ಬ ಪಾಪಿ. ದೇವರ ಹೊರತಾಗಿ ಯಾರಾದರೂ ಪರಿಪೂರ್ಣರಿದ್ದಾರೆಯೇ?"

"ಇಲ್ಲ, ದೇವರ ಹೊರತಾಗಿ ಬೇರೆ ಯಾರೂ ಇಲ್ಲ", ಅಹಮದ್ ಉತ್ತರಿಸಿದ.

"ದೇವರ ಮುಂದೆ ನಾವೆಲ್ಲರೂ ಪಾಪಿಗಳು. ಹೌದಲ್ಲವೇ?" ಕಾಸಿಮ್ ಅಹಮದ್‌ನ ಮುಖ ನೋಡಿ ಕೇಳುತ್ತಾನೆ.

ಅಹಮದ್ ಬೇರೇನೂ ಹೇಳಲಾರದೆ "ಹೌದು, ಅದು ನಿಜ" ಎಂದು ಒಪ್ಪಿಕೊಳ್ಳುತ್ತಾನೆ.

"ಹಾಗಾದರೆ ನಾನು ಅಬ್ರಹಾಮನ ಮಗನ ಸ್ಥಾನದಲ್ಲಿ ಇದ್ದೇನೆ. ನಾನು ಮರಣದ ಶಕ್ತಿಯೊಳಗೆ ಇದ್ದೇನೆ. ಆದರೆ ಪಾಪಕ್ಕೆ ಬಲಿ ಎಲ್ಲಿ? ನನ್ನ ಬದಲಿಗೆ ದೇವರು ಬಲಿಯನ್ನು ಕಳುಹಿಸಿಕೊಟ್ಟಿಲ್ಲವೇ?" ಕಾಸಿಮ್ ಕೇಳುತ್ತಾನೆ.

ಅಹಮದನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಕಾಸಿಮ್ ಮುಂದುವರಿಸುತ್ತಾ,

"ಸ್ನಾನಿಕನಾದ ಯೋಹಾನನು (ಯೋ ಹ್ಯಾ ಅಬ್‌ನ್ ಜಕರಿಯೊ) ಮೆಸ್ಸೀಯನ ಕಾಲದಲ್ಲಿ ಜೀವಿಸದ್ದನು." ಮೊದಲನೇ ಸಾರಿ ಮೆಸ್ಸೀಯನನ್ನು ಕಾಣುತ್ತಲೇ "*ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ-ಲೋಕದ ಪಾಪವನ್ನು ನಿವಾರಣೆ ಮಾಡುವವನು.*" (2)

"ಮೆಸ್ಸೀಯನು ಮನುಷ್ಯರ ಕುರಿಮರಿ ಅಲ್ಲ. ದೇವರಿಂದ ಆತನು ಬಂದವನು. ಆತನು ಮೇಲಣಿಂದ ಬಂದವನು. ದೇವರ ಆತ್ಮನು (ರೋಹ್ ಅಲ್ಲಾಹ್) ಕನ್ಯೆ ಮರಿಯಳನ್ನು (ಮರಿಯಾಮ್) ಸುತ್ತುವರಿದನು. ಅವಳು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆತ್ತಳು. ನಿನಗೆ ತಿಳಿದಿರುವಂತೆ ಆತನನ್ನು ಮರಿಯಳ ಪುತ್ರ 'ಯೇಸು', ದೇವರ ವಾಕ್ಯವು (ಕಲೀಮತ್ ಅಲ್ಲಾಹ್) ಮತ್ತು ದೇವರ ಆತ್ಮನು (ರೋಹ್ ಅಲ್ಲಾಹ್) ಎಂದು ಕರೆಯಲ್ಪಟ್ಟನು. ಆತನು ಪರಿಶುದ್ಧನಾಗಿದ್ದನು. ಆತನು ಪರಲೋಕದಿಂದ ದೇವರ ಕುರಿಮರಿಯಾಗಿ ಬಂದನು. ದೇವರ ಸಮಕ್ಷಮದಲ್ಲಿ

ಪರಿಪೂರ್ಣ (ಸ್ವಚ್ಛ) ಜೀವಿತ ಜೀವಿಸುವದರ ಮೂಲಕ ದೇವರ ಕುರಿಮರಿ ಎಂದು ಮೆಸ್ಸೀಯನು ಸಾಬೀತು ಮಾಡಲ್ಪಟ್ಟನು. ಆತನು ಪರಾತ್ಪರ ದೇವರ ಹತ್ತಿರ ಕ್ಷಮಿಸು ಎಂದು ಕೇಳುವ ಪ್ರಮೇಯವೇ ಆತನ ಜೀವಿತದಲ್ಲಿ ಬರಲಿಲ್ಲ. (ಅಸ್ತಗಫರ್ ಆಳ್ ಅಜೀಮ್) ಯಾಕೆಂದರೆ ಆತನು ದೇವರ ಪರಿಪೂರ್ಣ ಕುರಿಮರಿ. ಆತನು ದೇವರ ಪರಿಪೂರ್ಣ ಕುರಿಮರಿಯಾಗಿ ಬಂದದರಿಂದ ಲೋಕದ ಪಾಪವನ್ನು ಹೊತ್ತುಕೊಂಡು ಹೋಗಲಿಕ್ಕಾಗಿ ಆತನು ಬಲಿಯಜ್ಞವಾಗಬೇಕಾಯಿತು. ಆತನು ಸ್ವಂತ ಇಚ್ಛಾನುಸಾರ ತನ್ನ ಜೀವವನ್ನು ಮರಣಕ್ಕೆ ಒಪ್ಪಿಸಿಕೊಟ್ಟನು. ಆತನು ಸತ್ತವರೊಳಗಿಂದ ಎದ್ದು ಜೀವಂತವಾಗಿ ಪರಲೋಕಕ್ಕೇರಿಸಲ್ಪಟ್ಟನು. ಒಂದಾನೊಂದು ದಿನ ಆತನು ಇಹಲೋಕಕ್ಕೆ ಹಿಂತಿರುಗುತ್ತಾನೆ."

ಸ್ವಲ್ಪ ಹೊತ್ತು ಮೌನಿಯಾಗಿದ್ದ ಕಾಸಿಮ್, ಅಹಮದನನ್ನು ದೃಷ್ಟಿಸಿ ನೋಡಿ

"ನಾನೂ ಅಬ್ರಹಾಮನ ಮಗನ ಸ್ಥಾನದಲ್ಲಿದ್ದೇನೆ. ನಾನು ಮರಣದ ಅಧಿಕಾರದಲ್ಲಿದ್ದೇನೆ. ಆದರೆ ನನ್ನ ಪಾಪಗಳ ಬದಲಿಗೆ ಒಂದು ಬಲಿಯಜ್ಞವನ್ನು ದೇವರ ಪರಿಶುದ್ಧ ಕುರಿಮರಿಯಾದ ಮೆಸ್ಸೀಯನ ಮೂಲಕ ಇಡಲ್ಪಟ್ಟಿದೆ. ದೇವರು ನಮ್ಮ ಎಲ್ಲಾ ಪಾಪಗಳಿಗೆ ಕ್ಷಮಾಪಣೆಯನ್ನು ಅನುಗ್ರಹಿಸಿ ಪರಲೋಕದಲ್ಲಿ (ಜನತ್) ನಿತ್ಯಜೀವವನ್ನು ಕೊಡಲು ಕರೆಯುತ್ತಿದ್ದಾನೆ. ಮೆಸ್ಸೀಯನು ನನ್ನ ಮತ್ತು ನಿನ್ನ ಹಾಗಿದ್ದ ಎಲ್ಲಾ ಮಾನವ ಜನಾಂಗಗಳ ಪಾಪವನ್ನು ಹೊತ್ತಿದ್ದಾನೆ."

ಅಹಮದನು ಮೌನವಾಗಿ ಕುಳಿತನು. ಹಾಗೇ ಬಹಳ ಹೊತ್ತು ಯೋಚಿಸುತ್ತಿದ್ದು ನಂತರ "ಮೆಸ್ಸೀಯನು ಇಡೀ ಲೋಕದ ಪಾಪಗಳನ್ನು ಪರಿಹರಿಸಿರುವುದಾದರೆ, ನಾನು ಸಾಯುವ ಅವಶ್ಯಕತೆ ಇಲ್ಲ, ಅಂದರೆ ನನಗೀಗಾಗಲೇ ನಿತ್ಯಜೀವ ದೊರಕಿದೆ ಎಂದಾಯಿತು."

ಅಹಮದನಿಗೆ ಕಾಸಿಮ್ ಹೇಳ ತೊಡಗಿದ "ಒಂದು ವೇಳೆ ನಿನ್ನ ಹುಟ್ಟಿದ ಹಬ್ಬದಲ್ಲಿ ಮೆಸ್ಸೀಯನು ಬಹುಮಾನಗಳನ್ನು ಕೈಯಲ್ಲಿಡಿದು ನಿನ್ನ ಮನೆಯ ಕದ ತಟ್ಟಿ, ಅಹಮದ್, ನಿನಗೆ ನಾನು ಈ ಬಹುಮಾನ ಕೊಡಲು ಬಂದಿದ್ದೇನೆ. ಆ ಬಹುಮಾನ ಏನೆಂದರೆ ನಿನ್ನ ಪಾಪಗಳ ಕ್ಷಮಾಪಣೆ ಹಾಗೂ ನಿತ್ಯಜೀವ. ಈ ದಿನ ಮೊದಲುಗೊಂಡು ಇನ್ನು ಮುಂದೆ ಯಾವಾಗಲೂ ದೇವರೊಟ್ಟಿಗೆ ನೀನು ವೈಯಕ್ತಿಕವಾದ ಸಂಬಂಧದಲ್ಲಿ ಜೀವಿಸುವುದೇ ಆಗಿದೆ. ಆದರೆ ಅದಕ್ಕೆ ಕೆಲವು

ನಿಬಂಧನೆಗಳಿವೆ. ನೀನು ನಿನ್ನ ಪಾಪಗಳಿಂದ ತಿರುಗಿಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳಬೇಕು. ನಿನಗಾಗಿ ಮಾಡಿದ ಬಲಿಯಜ್ಞದ ಮೂಲಕ ಕ್ಷಮಾಪಣೆಯನ್ನು ಹೊಂದಿಕೊಳ್ಳಬೇಕು. ನೀನು ಈ ಬಹುಮಾನ ಸ್ವೀಕರಿಸಿದರೆ ಇದು ನಿನ್ನದಾಗುತ್ತದೆ. ಇಲ್ಲವಾದರೆ ನಿನಗೆ ದೊರಕುವುದಿಲ್ಲ." ಎಂದು ಹೇಳಿದರೆ ಹೇಗನಿಸುತ್ತದೆ?

ಅಹಮದನು ಸ್ಥಬ್ದನಾಗಿ ಕುಳಿತ, ಯೋಚಿಸಿದ, ಅವನಿಗೆ ಗಲಿಬಿಲಿಯುಂಟಾಯಿತು. ಏನು ಮಾಡಲೂ ತೋಚದಂತಾಯಿತು.

"ಒಂದು ವೇಳೆ ಅದೊಂದು ಅತಿರೇಕದ ಉದಾಹರಣೆ ಎಂದು ನೆನಸುತ್ತೇನೆ" ಎಂದು ಕಾಸಿಮ್ ಹೇಳುತ್ತಾ "ಪ್ರತೀ ಸಾರಿಯೂ ದೇವರ ಕಡೆಗಿನ ಮಾರ್ಗವನ್ನು ಮೆಸ್ಸೀಯನ ಮುಖಾಂತರವೇ ದೇವರ ಸೇವಕ ವಿವರಿಸುತ್ತಾನೆ". ಪುನರುತ್ಥಾನ ಹೊಂದಿ ಜೀವಿಸುವ ಮರಿಯಳ ಮಗನಾದ ಯೇಸುವು ನಮ್ಮ ಬಾಗಿಲುಗಳನ್ನು ತಟ್ಟುತ್ತಾ ಇದ್ದಾನೆ. ಆತನು ಬೈಬಲ್‌ನಲ್ಲಿ, *"ಇಗೋ ನಾನು ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು."* **(3)** ಎಂದಿದ್ದಾನೆ.

ಕಾಸಿಮ್ ಮುಂದುವರಿಸುತ್ತಾ "ಮೆಸ್ಸೀಯನಿಗೆ ಬಾಗಿಲು ತೆರೆಯುವುದು ಮತ್ತು ಆತನನ್ನು ನನ್ನ ಜೀವಿತದೊಳಗೆ ಆಹ್ವಾನಿಸುವುದು, ಆತನೊಂದಿಗೆ ರೊಟ್ಟಿ ಮುರಿಯುವುದು, ಊಟ ಮಾಡುವುದು ಮತ್ತು ಆತನು ನನ್ನೊಂದಿಗೆ ಅನ್ಯೋನ್ಯತೆ ಪಡೆಯುವುದು ಎಂದರೆ ಖಂಡಿತವಾಗಿ ಬಹುಮಾನ ಪಡೆದಂತೆಯೇ. ಈ ಬಹುಮಾನವನ್ನು ದೇವರು ಪ್ರತೀ ಒಬ್ಬನಿಗೂ ಕೊಡಲು ಆಶಿಸುತ್ತಾನೆ."

ಅಹಮದನು ವಿಚಾರ ಮಗ್ನನಾಗಿ "ಕಾಸಿಮ್, ನೀನು ಮೆಸ್ಸೀಯನ ಕುರಿತಾಗಿ ಹೇಳಿದ ವಿಷಯ ನನ್ನ ಹೃದಯದಲ್ಲಿ ಆಳವಾಗಿ ಮುಟ್ಟಿದೆ. ನಮ್ಮ ಈ ಸಂಭಾಷಣೆಯ ಕುರಿತು ನಾನು ಯೋಚಿಸಲು ಸ್ವಲ್ಪ ಕಾಲಾವಕಾಶಬೇಕು. ಆದರೆ ಈ ಮೆಸ್ಸೀಯನ ಕುರಿತು ನಾನು ಇನ್ನೂ ವಿವರವಾಗಿ ಕೇಳಬೇಕೆನಿಸಿದೆ. ನಾವು ಮತ್ತೊಮ್ಮೆ ಮುಂದಿನ ಸಾರಿ ಇದರ ಕುರಿತು ಮಾತಾಡುವ."

ಆಲ್-ಸಲಾಮೋ-ಆಲೇ ಕುಮ್ (ನಿನಗೆ ಸಮಾಧಾನವಿರಲಿ)

ಆಲೇಕುಮ್-ಆಲ್-ಸಲಾಮ್ (ನಿನ್ನ ಮೇಲೂ ಸಮಾಧಾನವಿರಲಿ)

(1) ರೋಮಾಪುರದವರಿಗೆ 6:23 (2) ಯೋಹಾನ 1:29 (3) ಪ್ರಕಟನೆ 3:20

# ದೇವರ ವಾಕ್ಯ

"ಕಳೆದ ಬಾರಿ ಮರಿಯಳ ಮಗನಾದ ಯೇಸುವಿನ ಕುರಿತು ಹೇಳಿದ ವಿಷಯಗಳ ಕುರಿತು ಬಹಳಷ್ಟು ಆಲೋಚಿಸಿದೆನು", ಅಹಮದನು ತಮ್ಮ ಸಂಭಾಷಣೆ ಪ್ರಾರಂಭಿಸಿದನು. "ನಿನಗೆ ಆಕ್ಷೇಪಣೆ ಇಲ್ಲದಿದ್ದರೆ ನನ್ನಲ್ಲಿ ಅನೇಕ ಪ್ರಶ್ನೆಗಳಿವೆ. ಮೆಸ್ಸೀಯನ ಕುರಿತಾಗಿ ನಾವು ಮಾತಾಡಲು ಪ್ರಾರಂಭಿಸುವ ಮುನ್ನ ಅವುಗಳಿಗೆ ಉತ್ತರ ಬಯಸುತ್ತೇನೆ, ಆಗಬಹುದೋ" ಎಂದನು.

"ಅದಕ್ಕೇನಂತೆ, ಕೇಳಲು ಪ್ರಾರಂಭಿಸು" ಎಂದು ಕಾಸಿಮ್ ಅವನ ಬಹುತೇಕ ಪ್ರಶ್ನೆಗಳನ್ನು ಅರ್ಥಮಾಡಿಕೊಂಡವನಂತೆ ಹೇಳಿದನು.

"ನಾವು ಮುಸ್ಲಿಮರೆಂದು ನಿನಗೆ ಗೊತ್ತಿದೆ. ನಾವು ಪರಲೋಕದ ಪುಸ್ತಕಗಳನ್ನು "ಆಲ್ ತೊರಾಹ್" (ಮೋಶೆಯ ಐದು ಪ್ರಥಮ ಗ್ರಂಥಗಳು), ಆಲ್ ಜಬೂರ್ (ದಾವೀದನ ಕೀರ್ತನೆಗಳು), ಆಲ್-ಇಂಜಿಲ್ (ಯೇಸುವಿನ ಸುವಾರ್ತೆಗಳು) ಮತ್ತು ಪರಿಶುದ್ಧ ಖುರಾನ್‌ಗಳನ್ನು ಬಲ್ಲೆವು. ಆದರೆ ಖುರಾನನ್ನುಳಿದು ಮಿಕ್ಕ ಗ್ರಂಥಗಳನ್ನು ಯೆಹೂದಿಗಳೂ, ಕ್ರೈಸ್ತರೂ ತಪ್ಪಾಗಿ ಅರ್ಥೈಸಿದ್ದಾರೆ ಎಂಬುದಾಗಿ ನಾವು ಕಲಿತಿದ್ದೇವೆ. ಆದುದರಿಂದ ಅವುಗಳಲ್ಲಿ ಬರೆದಿರುವವುಗಳನ್ನು ನಾವು ನಂಬಬೇಕಾಗಿಲ್ಲ, ಎಂದಿರುವಾಗ ನೀನು ನಂಬಿರುವ ಪರಿಶುದ್ಧ ಗ್ರಂಥ (ಬೈಬಲ್) ಸುಳ್ಳು ಸತ್ಯಗಳಿಂದ ಕೂಡಿ ಮಲೀನವಾಗಿವೆ. (ಮೊಹರಫ್)" ಎಂಬ ಸಂದೇಹ ಅಹಮದ್ ಮುಂದಿಟ್ಟನು.

"ನೀನು ಹೇಳುವುದನ್ನು ಚಾರಿತ್ರಿಕವಾಗಿ ಸಾಬೀತುಗೊಳಿಸಲು ಸಾಧ್ಯವೋ?"

ಕಾಸಿಮ್ ಮರುಪ್ರಶ್ನೆ ಹಾಕುತ್ತಾನೆ.

ಅಹಮದ್ ಸ್ವಲ್ಪ ಯೋಚಿಸಿ, ಅವುಗಳ ಕುರಿತ ಯಾವ ದೂಷಣೆ ಇಲ್ಲದಿರುವುದನ್ನು ಆಶ್ಚರ್ಯಚಕಿತನಾಗಿ ತಿಳಿದುಕೊಂಡನು.

ಕಾಸಿಮ್ ಮುಂದುವರಿಸುತ್ತಾ "ಈ ಮಲೀನತ್ವದ ಕುರಿತು ಯಾವಾಗ ಮತ್ತು ಯಾವ ಕಾರಣಕ್ಕಾಗಿ ಪ್ರಚಾರವಾಯಿತೆಂದು ಹೇಳಲು ಸಾಧ್ಯವೋ?"

ಎಂದಾಗ ಅಹಮದನು ಸ್ವಲ್ಪ ಆತಂಕದ ಧ್ವನಿಯಲ್ಲಿ "ಇಲ್ಲ-ನಾನು ಹೇಳಲಾರೆ, ಯಾಕೆಂದರೆ ಈ ಮುಖ್ಯವಾದ ಪ್ರಶ್ನೆಗಳಿಗೆ ಯಾರೂ ಈವರೆಗೆ ಉತ್ತರಿಸಿಲ್ಲ".

ಸ್ವಲ್ಪಕಾಲ ಮೌನದಿಂದಿದ್ದು ಕಾಸಿಮ್ ಮರುಪ್ರಶ್ನೆ ಹಾಕುತ್ತಾನೆ.

"ಖುರಾನ್ ಕೂಡಾ ಮಲೀನಗೊಳ್ಳಲು ಸಾಧ್ಯವಿತ್ತು ಎಂಬುದನ್ನು ನಂಬುತ್ತೀಯಾ?"

"ದೇವರ ಹತ್ತಿರ ಕ್ಷಮೆ ಕೇಳುತ್ತೇನೆ" (ಅಸ್ತಗ್ ಫೆರ್ ಅಲ್ಲಾಹ್) ಎನ್ನುತ್ತಾ "ಅದೆಂದೂ ಸಾಧ್ಯವೇ ಇಲ್ಲ. ವಿಶ್ವಾಸಿಗಳೆಂದೂ ಅವುಗಳನ್ನು ಮಲೀನವಾಗಲು ಬಿಡಲಿಲ್ಲ" ಎಂದುತ್ತರಿಸಿದನು ಅಹಮದ್.

"ಹಾಗಿದ್ದ ಪಕ್ಷದಲ್ಲಿ ಬೈಬಲನ್ನು ಬೇರೆ ರೀತಿಯಲ್ಲಿ ಯಾಕೆ ಯೋಚಿಸುತ್ತೀ? ನಿಜ ವಿಶ್ವಾಸಿಗಳು ಪರಿಶುದ್ಧ ಗ್ರಂಥಗಳನ್ನು ಬದಲಾಯಿಸಲು ಆಸ್ಪದ ಕೊಟ್ಟು, ಮಲೀನವಾದ ಬೈಬಲ್ ಕೊಟ್ಟರೆಂದು ಯಾಕೆ ಯೋಚಿಸುತ್ತೀ? ಪರಲೋಕ, ಭೂಲೋಕಗಳನ್ನು ಸೃಷ್ಟಿಸಿದ ದೇವರು, ಸರ್ವಜ್ಞನಾದ ದೇವರು, ಸರ್ವಶಕ್ತನಾದ ದೇವರು, ತಾನೇ ತನ್ನ ಸ್ವಂತ ವಾರ್ತೆಯನ್ನು ಮಾನವನಿಗೆ ಕೊಟ್ಟಾತನಾದ ದೇವರು ಅದನ್ನು ಮಲೀನಗೊಳಿಸುವುದರ ವಿರುದ್ಧ ಕಾಪಾಡಲು ಶಕ್ತಿ ಇರಲಿಲ್ಲವೋ?"

ತನ್ನ ದೃಷ್ಟಿಯನ್ನು ಅಹಮದನ ಮೇಲಿಟ್ಟು "ದೇವರು ಮೊದಲು ತನ್ನ ವಾಕ್ಯವನ್ನು ಲೋಕಕ್ಕೆ ಕೊಟ್ಟು ನಂತರ ಅದು ಮಲೀನಗೊಳ್ಳುವಂತೆ ಮಾಡಿದ್ದಾನೆಂದು ನಂಬುತ್ತೀಯೋ? ಅಥವಾ ಅದೇ ಸರ್ವಶಕ್ತ ದೇವರು ತನ್ನ ವಾಕ್ಯವು ಮಲೀನವಾಗಲು ಬಿಡುತ್ತಾನೋ?"

"ಹೌದು ದೇವರು ತನ್ನ ವಾಕ್ಯವನ್ನು ಮಲೀನಗೊಳಿಸಲು ಬಿಡಲಾರ ಅದನ್ನು ಖಂಡಿತವಾಗಿ ಕಾಪಾಡುತ್ತಾನೆ". ಅಹಮದ್ ಒಪ್ಪಿಕೊಳ್ಳುತ್ತಾನೆ.

"ಅಹಮದ್, ಬೈಬಲ್ ಒಂದು ಅದ್ಭುತವಾದ ಪುಸ್ತಕ ಎಂಬುದನ್ನು ಬಲ್ಲೆಯಾ? ಅದು ಸುಮಾರು **1400** ವರ್ಷಗಳಿಗಿಂತಲೂ ಹೆಚ್ಚಾದ ಅವಧಿಯಲ್ಲಿ ಬರೆಯಲ್ಪಟ್ಟು ಅದರಲ್ಲಿ ಪಂಚಕಾಂಡಗಳು (ಅಲ್ ತೋರಾಹ್), ಕೀರ್ತನೆಗಳು

(ಆಲ್-ಜಬೂರ್) ಸುವಾರ್ತೆಗಳು (ಆಲ್ ಏಂಜಲ್) ಮತ್ತು ಅನೇಕ ದೇವರ ಆಪೊಸ್ತಲರಿಂದ (ರಸೂಲ್) ಬರೆಯಲ್ಪಟ್ಟ ಅನೇಕ ಪುಸ್ತಕಗಳು, ಪ್ರವಾದನೆಗಳು (ಅನ್‌ಬಿಯಾ) ತುಂಬಿವೆ ಎಂದು ಬಲ್ಲೆಯಾ? ಬೈಬಲ್ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಹಳೇಒಡಂಬಡಿಕೆ - ಅದರಲ್ಲಿ ಮೆಸ್ಸೀಯನು ಹುಟ್ಟುವುದಕ್ಕಿಂತ ಮುಂಚಿತವಾಗಿ ಬರೆಯಲ್ಪಟ್ಟವು. ಹೊಸಒಡಂಬಡಿಕೆ ಅದು ಮೆಸ್ಸೀಯನು ಬಂದ ನಂತರದ ವಿಷಯವು ಅಡಕವಾಗಿದೆ. ಬೈಬಲ್ ಮೂರು ಬೇರೆ ಬೇರೆ ಭಾಷೆಗಳಿಂದ ಬರೆಯಲ್ಪಟ್ಟಿದೆ."

"ಅವು ಯಾವ (ಮೂರು) ಭಾಷೆ?" ಆಶ್ಚರ್ಯದಿಂದ ಅಹಮದನು ಕೇಳಿದ.

"ಅವು ಹಿಬ್ರೂ, ಅರಮಾಯಿಕ್ ಮತ್ತು ಗ್ರೀಕ್ ಭಾಷೆಗಳು. ದೇವರು ತನ್ನ ವಾಕ್ಯವನ್ನು ಕೊಡಲು ಬೇರೆ ಬೇರೆ ತರದ ಜನರನ್ನು ಉಪಯೋಗಿಸಿದನು. ಕೆಲವರು ಅರಸರು, ಇನ್ನಿತರರು ಕುರುಬರು ಅಥವಾ ಬೆಸ್ತರು. ಬೈಬಲ್ ದೇವರಿಂದ ಬಂದ ಒಂದು ಅದ್ಭುತ ಕಾರ್ಯ. ಯಾಕೆಂದರೆ ಅದು ಅನೇಕ ದೀರ್ಘಕಾಲಗಳಲ್ಲಿ ಬೇರೆಬೇರೆ, ವಿಭಿನ್ನ ವ್ಯಕ್ತಿಗಳಿಂದ ಬರೆಯಲ್ಪಟ್ಟ ಬರಹವಾಗಿದೆ. ಆದರೂ ಅದೊಂದು ಅದ್ಭುತವಾದ ಒಂದೇ ಪುಸ್ತಕವಾಗಿದೆ. ಅದರಲ್ಲಿ ಸಾಮಾನ್ಯವಾದ ಒಂದೇ ಗುರಿ ಇದ್ದು, ಆ ಗುರಿ ಇಡೀ ಬೈಬಲ್‌ನಲ್ಲಿ ಮೆಸ್ಸೀಯನ ಕುರಿತೇ ಬರೆಯಲ್ಪಟ್ಟ ಬರಹವಾಗಿದೆ (ಆಲ್-ಮೆಶೀಹ್)."

ಅಹಮದನು ಆಶ್ಚರ್ಯಚಕಿತನಾಗಿ, "ಮೆಸ್ಸೀಯನ ಕುರಿತಾಗಿ 1400 ವರ್ಷಗಳು ದೇವರು ಮಾತಾಡಿದ್ದು ಸತ್ಯವಾಗಿದೆಯೇ?"

"ಅಹಮದ್, ದೇವರು ಈ ಮೆಸ್ಸೀಯನ ಕುರಿತಾಗಿ ಇಡೀ ಚರಿತ್ರೆಯಲ್ಲಿ ಈ ದಿನದವರೆಗೂ ಮಾತಾಡಿದ್ದಾನೆ".

ಕಾಸಿಮ್ ನಸುನಗುತ್ತಾ ಹೇಳುತ್ತಾನೆ.

"ಅದು ಖಂಡಿತವಾಗಿಯೂ ಸಾಧ್ಯವೋ?" ಅಹಮದನ ಸಂದೇಹದ ಪ್ರಶ್ನೆ.

"ಹೌದು, ಇದು ಸತ್ಯವಾದದೆ. ಯಾಕೆಂದರೆ ದೇವರಿಂದ ಎಲ್ಲವೂ ಸಾಧ್ಯವೇ. ಇದರ ಕುರಿತು ಮುಂದಿನ ಭೇಟಿಯಲ್ಲಿ ಮಾತನಾಡುವ." ಕಾಸಿಮ್ ಮಾತು ಮುಗಿಸುತ್ತಾನೆ.

"ಹೌದೌದು. ನಾನು ಆ ಸಮಯಕ್ಕಾಗಿ ಎದುರು ನೋಡುತ್ತೇನೆ".

ಅಹಮದನು ನಿರೀಕ್ಷೆಯುಳ್ಳ ಭಾವದಿಂದ ಹೇಳುತ್ತಾನೆ.

"ಅಲ್-ಸಲಾಮೋ-ಅಲೆ ಕುಮ್"

"ಅಲೆಕುಮ್ ಅಲ್ ಸಲಾಮ್"

## ದೇವರ ಬಲಿಯಜ್ಞ

"ಇಡೀ ಬೈಬಲಿನಲ್ಲಿ ಮೆಸ್ಸೀಯನನ್ನೇ ಗುರಿಯಾಗಿರಿಸಿರುವದರ ಕುರಿತು ನಾನು ನಿಜವಾಗಿ ಕುತೂಹಲಗೊಂಡಿದ್ದೇನೆ". ಎಂದು ಅಹ್ಮದ ನುಡಿದನು.

ಅದಕ್ಕೆ ಕಾಸಿಮನು "ನಮ್ಮ ಪಾಪಗಳನ್ನು ಹೊತ್ತ ದೇವರ ಕುರಿಮರಿಯಾದ ಮೆಸ್ಸೀಯನ ಕುರಿತಾಗಿ ನಾವು ಮಾತಾಡುತ್ತಾ ಇದ್ದದ್ದನ್ನು ನೆನಪು ಮಾಡಿಕೊಳ್ಳುತ್ತೀಯೋ" ಎಂದನು.

"ಹೌದೌದು. ಅದನ್ನು ಮರೆಯುವುದುಂಟೇ?" ಅಹಮದನ ಅವಸರವಸರದ ಮಾತು.

"ದೇವರು ಮಾನವನಿಗೆ ಬಲಿಯಜ್ಞದ ಕುರಿತು ಮರಿಯಳ ಮಗನಾದ ಯೇಸುವಿನವರೆಗೆ ಬೋಧಿಸುತ್ತಿರುವುದನ್ನು ಚರಿತ್ರೆಯಲ್ಲಿ ನೋಡುತ್ತೇವೆ". ಕಾಸಿಮನು ನುಡಿದಾಗ,

"ಯಾವ ರೀತಿಯಲ್ಲಿ?" ಅಹಮದನ ಪ್ರಶ್ನೆ

"ಕಾಯಿನನ (ಕ್ವಾಬಿಲ್) ಮತ್ತು ಹೇಬೇಲನ (ಹಾಬಿಲ್) ಕಾಲದಲ್ಲಿ ಎಷ್ಟು ಜನರು ಈ ಪ್ರಪಂಚದಲ್ಲಿ ವಾಸಿಸುತ್ತಿದ್ದರು?"

ಕಾಸಿಮನ ಪ್ರಶ್ನೆಗೆ ಅಹಮದನು ಸ್ವಲ್ಪ ಯೋಚಿಸಿ

"ನಾಲ್ಕು ಜನರು ಆದಾಮ್, ಹವ್ವ (ಹವ), ಕಾಯಿನನು ಮತ್ತು ಹೇಬೇಲನು".

"ಹೌದು! ನಾಲ್ಕೇ ಜನರಿದ್ದರೂ ದೇವರನ್ನು ಆರಾಧಿಸಿ ದೇವರಿಗೆ ಬಲಿಯಜ್ಞ ಸಮರ್ಪಿಸುವ ಅವಶ್ಯಕತೆಯನ್ನು ಅರಿತಿದ್ದರು. ಅವರಿಗೆ ಅದು ಹೇಗೆ ತಿಳಿದಿತ್ತು? ಹೌದು! ದೇವರು ಪರಿಶುದ್ಧನೂ, ಸ್ವಚ್ಛವುಳ್ಳವನೂ, ಮಾನವನು ಒಬ್ಬ ಪಾಪಿಯಾಗಿದ್ದು ತನ್ನ ಪಾಪ ಪರಿಹಾರಕ್ಕೆ ಬಲಿಯಜ್ಞ ಅವಶ್ಯಕವೆಂಬುದನ್ನು

ಅರಿತಿದ್ದರು. ನೋಹ (ಸಯಿದ್ನಾ ನೊಹ್) ದೇವರನ್ನು ಬಲಿಯಜ್ಞದಿಂದ ಆರಾಧಿಸಿದನು. ಅಬ್ರಹಾಮನು (ಸಯಿದ್ನಾ ಇಬ್ರಾಹಿಮ್) ಬಲಿಯಜ್ಞದಿಂದ ದೇವರನ್ನುಆರಾಧಿಸಿದನು. ಮೋಶೆ (ಸಯಿದ್ನಾ ಮೂಸ), ದಾವೀದ (ಸಯಿದ್ನಾ ದಾವೂದ್) ಮತ್ತು ಎಲ್ಲಾ ಅಪೋಸ್ತಲರೂ, ಪ್ರವಾದಿಗಳೂ ದೇವರನ್ನು ಬಲಿಯಜ್ಞದಿಂದ ಆರಾಧಿಸಿದರು." ಕಾಸಿಮ್ ಮುಂದುವರಿಸುತ್ತಾ "ನಾನೂ ಸಹ ದೇವರನ್ನು ಅಪೋಸ್ತಲರು ಹಾಗೂ ಪ್ರವಾದಿಗಳ ಹಾಗೆ ಆರಾಧಿಸುತ್ತೇನೆ" ಎಂದನು.

ಕೂಡಲೆ "ಇಲ್ಲಾ, ನೀನು ತಮಾಷೆ ಮಾಡುತ್ತಿದ್ದೀಯೆ. ನೀನೂ ಮಾರುಕಟ್ಟೆಗೆ ಹೋಗಿ ಕುರಿಯನ್ನು ಖರೀದಿಸಿ ದೇವರಿಗೆ ಬಲಿಯಜ್ಞ ಕೊಡುತಿಲ್ಲವಲ್ಲಾ" ಎಂದನು ಅಹಮದನು.

"ನಾನು ದೇವರನ್ನು ಮೆಸ್ಸೀಯನ ಮೂಲಕ ಆರಾಧಿಸುತ್ತೇನೆ. ಆ ಮೆಸ್ಸೀಯನು ದೇವರ ಕುರಿಮರಿ, ಆತನೇ ನನ್ನ ಪಾಪವನ್ನು ಹೊತ್ತುಕೊಂಡು ಬಲಿಯಜ್ಞನಾದನು. ಇದು ಹಾಗೆಯೇ ಪರಿಶುದ್ಧ ಗ್ರಂಥದಲ್ಲಿ ಬರೆಯಲ್ಪಟ್ಟಿದೆ." (ಬೈಬಲ್)

*ಏಕೆಂದರೆ ದೇವರು ಒಬ್ಬನೇ. ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು.*(1)

"ದೇವರು ಒಬ್ಬನೇ ಮತ್ತು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನೇ ಮೆಸ್ಸೀಯನು. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನೇ ಒಪ್ಪಿಸಿಬಿಟ್ಟನು (ಫಿದಾ). ಅಹಮದ್ ಅದು ನಿನಗೂ ಸಹ. ಈ ದಿನದ ವರೆಗೂ ಇಡೀ ಚರಿತ್ರೆಯಲ್ಲಿ ಜನರು ದೇವರನ್ನು ಬಲಿಯಜ್ಞದಿಂದ ಆರಾಧಿಸುತ್ತಾರೆ."

ಅಹಮದನು ವಿವೇಚನೆಯಿಂದ "ನೀನು ಹೇಳುತ್ತಿರುವುದು ಈಗ ಅರ್ಥವಾಗಲು ಪ್ರಾರಂಭವಾಗಿದೆ. ಆದರೆ ನೀನಿನ್ನೂ ವಿವರವಾಗಿ ತಿಳಿಸಿದರೆ ನನಗೆ ಸಂಪೂರ್ಣವಾಗಿ ಅರ್ಥವಾಗಲು ಸಾಕು" ಎಂದನು.

ಸ್ವಲ್ಪ ಸಮಯ ಸುಮ್ಮನಿದ್ದು ಕಾಸಿಮ್ "ದೇವರು ಚರಿತ್ರೆಯಲ್ಲಿ ಈ ಬಲಿಯಜ್ಞದ ಕುರಿತು ತಿಳಿಸುತ್ತಾ ಬಂದಿದ್ದಾನೆ. ವಿಶೇಷವಾಗಿ ಪಂಚಕಾಂಡಗಳಲ್ಲಿ (ತೋರಾಹ್) ಮೋಶೆಯು ಇದನ್ನು ಸವಿಸ್ತಾರವಾಗಿ ತಿಳಿಸುತ್ತಾನೆ. ಇಡೀ ಧರ್ಮಶಾಸ್ತ್ರದ

ಬೋಧನೆಯಲ್ಲಿ (ಆಲ್ ಶರಿಯಾ) ಬಲಿಯಜ್ಞದ ಅರ್ಥವು ಪಾಪ ವಿಮೋಚನೆಗಾಗಿ ಎಂದು ಸ್ಪಷ್ಟವಾಗಿ ಕೆಳಕಂಡ ದೇವರ ವಾಕ್ಯದಲ್ಲಿ ತಿಳಿಸುತ್ತಾ ಬರುತ್ತಾನೆ."

*ಧರ್ಮಶಾಸ್ತ್ರದ ಪ್ರಕಾರ ಸ್ವಲ್ಪ ಕಡಿಮೆ ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವವು. ರಕ್ತಧಾರೆ ಇಲ್ಲದೆ ಪಾಪ ಪರಿಹಾರವಿಲ್ಲ.* (2)

"ಮರಿಯಳ ಮಗನಾದ ಯೇಸುವಿನ ಜತೆಗೆ ಈ ಬಲಿಯಜ್ಞದ ಕುರಿತು ಯಾವ ಬೋಧನೆ ಇದೆ?" ಇದು ಅಹಮದನ ಆಶ್ಚರ್ಯಚಕಿತ ಪ್ರಶ್ನೆ.

ಅದಕ್ಕೆ ಕಾಸಿಮ್ "ಬಲಿಯಜ್ಞದ ಬೋಧನೆಗೆ ಸಮನಾಗಿ ಮೆಸ್ಸೀಯನ ಸಂಬಂಧದ ಕುರಿತು ಅನೇಕ ಪ್ರವಾದನೆಗಳು ತಿಳಿಸುತ್ತವೆ. ಈ ಪ್ರವಾದನೆಗಳ ಜತೆಗೆ ಈ ಮೆಸ್ಸೀಯನು ನಮ್ಮ ಪಾಪಗಳ ವಿಮೋಚನಾರ್ಥವಾಗಿ ತಾನೇ ಬಲಿಯಜ್ಞವಾಗುತ್ತಾನೆಂದು ತಿಳಿಸುತ್ತದೆ." ಎಂದು ತಿಳಿಸುತ್ತಾ ಸತ್ಯವೇದವನ್ನು (ಬೈಬಲ್) ತೆಗೆದುಕೊಂಡು ಅದರಲ್ಲಿರುವ ಭಾಗವನ್ನು ಅಹಮದನಿಗೆ ತೋರಿಸುತ್ತಾ, "ಮೆಸ್ಸೀಯನು ಬರುವುದಕ್ಕಿಂತ ಸುಮಾರು 700 ವರ್ಷಗಳ ಮೊದಲೇ ಮೆಸ್ಸೀಯನ ಬಲಿಯಜ್ಞದ ಕುರಿತು ಇರುವ ವಿವರಗಳನ್ನು ನೀನೇ ನೋಡು" ಎಂದು ತೋರಿಸುತ್ತಾನೆ.

*ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು. ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು. ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಶಾಂತಿಯನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿ ತಪ್ಪಿ ತೊಳಲುತ್ತಿದ್ದೆವು. ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು. ನಮ್ಮೆಲ್ಲರ ದೋಷ ಫಲವನ್ನು ಯೆಹೋವನು ಅವನ ಮೇಲೆ ಹಾಕಿದನು. ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು. ಬಾಯಿ ತೆರೆಯಲಿಲ್ಲ, ವಧ್ಯಸ್ಥಾನಕ್ಕೆ*

*ಒಯ್ಯಲ್ಪಡುವ ಕುರಿಯಂತೆಯೂ, ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು. ಬಾಯಿ ತೆರೆಯಲೇ ಇಲ್ಲ.* (3)

ಅಹಮದನಿಗೆ ಈ ಪ್ರವಾದನಾ ವಾಕ್ಯಗಳು ಮನಸ್ಸಿಗೆ ಆಳವಾಗಿ ನಾಟಿದವು. ಅವನು ಆಶ್ಚರ್ಯಚಕಿತನಾಗಿ "ಈ ವಾಕ್ಯಗಳು ಮರಿಯಳ ಮಗನಾದ ಯೇಸು ಹುಟ್ಟುವದಕ್ಕಿಂತ ನೂರಾರು ವರ್ಷಗಳ ಹಿಂದೆ ಬರೆಯಲ್ಪಟ್ಟವೆಂದು ಹೇಳುತ್ತೀಯಾ?" ಎಂದನು.

"ಹೌದು. ಪ್ರವಾದಿಗಳ ಪ್ರಕಾರ ಮೆಸ್ಸೀಯನು ಪ್ರವಾದಿ ದಾವೀದನ (ನಭಿ ಧಾವೂದ್) ವಂಶದಿಂದ ಬರಬೇಕಿತ್ತು. ದಾವೀದನು ಮೆಸ್ಸೀಯನಿಗಿಂತ ಸಾವಿರ ವರ್ಷಗಳ ಹಿಂದೆ ಜೀವಿಸಿದ್ದರೂ, ಭವಿಷ್ಯತ್ತಿನ ಮಗ, ಮೆಸ್ಸೀಯನ ಶಿಲುಬೆಯ ಮರಣವನ್ನು ಖಚಿತವಾಗಿ ವಿವರಣೆ ನೀಡಿದ್ದನು. ಶಿಲುಬೆಯ ಮರಣ, ಬಹು ನಿಧಾನವಾದ ಮತ್ತು ಬಹು ನೋವು, ನರಳಾಟದಿಂದ ಕೂಡಿದ ಮರಣ ದಂಡನೆ ಆಗಿತ್ತು. ನಂತರ ಈ ಕ್ರೂಜಿಸಲ್ಪಟ್ಟವನ ಎಲುಬಿನ ಕೀಲುಗಳು ಸಡಿಲಿ ಹೋಗುವ ಯಾತನೆ, ಜತೆಗೆ ಸಹಿಸಲಸಾಧ್ಯವಾದ ನೀರಡಿಕೆ ಇವೆಲ್ಲವೂ ಮುಂತಿಳಿಸಲ್ಪಟ್ಟಿತ್ತು. ಪ್ರವಾದಿಯಾದ ದಾವೀದನು ಹೀಗೆ ಪ್ರವಾದನೆಯಲ್ಲಿ ಬರೆಯುತ್ತಾನೆ.

*ನಾನು ಹೊಯ್ಯಲ್ಪಟ್ಟ ನೀರಿನಂತಿದ್ದೇನೆ. ನನ್ನ ಎಲುಬುಗಳು ಸಡಿಲಿ ಹೋಗಿವೆ. ನನ್ನ ಗುಂಡಿಗೆ ಮೇಣದಂತೆ ನನ್ನಲ್ಲಿ ಕರಗಿ ಹೋಗಿದೆ. ನನ್ನ ಶಕ್ತಿಯು ಬೋಕಿಯ ಹಾಗೆ ಒಣಗಿ ಹೋಗಿದೆ. ನನ್ನ ನಾಲಿಗೆಯು ಅಂಗಳಕ್ಕೆ ಹತ್ತಿಹೋಗಿದೆ. ನೀನು ನನ್ನನ್ನು ಮಣ್ಣಿಗೆ ಸೇರಿಸುತ್ತೀ. ನಾಯಿಗಳು ನನ್ನನ್ನು ಸುತ್ತಿಕೊಂಡಿವೆ. ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. ನನ್ನ ಕೈಕಾಲುಗಳನ್ನು ತಿವಿದಿದ್ದಾರೆ. ನನ್ನ ಎಲುಬುಗಳನ್ನೆಲ್ಲಾ ಎಣಿಸುವದಕ್ಕಾಗುವುದು. ಅವರೋ ನನ್ನನ್ನು ನೋಡಿ ನೋಡಿ ಹಿಗ್ಗುತ್ತಾರೆ. ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ.* (4)

ಈ ವಿಧದ ಕ್ರೂಜೆಯ ಮರಣದಂಡನೆ ಜಾರಿಯಲ್ಲಿಲ್ಲದ ತನ್ನ ಕಾಲದಲ್ಲಿ ದಾವೀದನು ಇದನ್ನು ಬರೆದನು. ಇದಾದ ಅನೇಕ ಕಾಲದ ತರುವಾಯ ಕ್ರೂಜೆಯ ಮರಣದ ಶಿಕ್ಷೆಯನ್ನು ರೋಮಾಯರು ಮೆಸ್ಸೀಯನ ಕಾಲದಲ್ಲಿ ಕಂಡು ಹಿಡಿದರು.

ಅಹಮದನು ತದೇಕ ಮನಸ್ಸಿನಿಂದ ಕೇಳುತ್ತಾ "ಹಾಗಾದರೆ ಮರಿಯಳ ಮಗನಾದ ಯೇಸುವಿನಲ್ಲಿ ಈ ಮುಂತಿಳಿಸುವಿಕೆ ನೆರವೇರಿತು ಎನ್ನುತ್ತೀಯಾ?" ಎಂದನು.

"ಹೌದು. ಇಷ್ಟು ಮಾತ್ರವಲ್ಲ, ಅನೇಕ ಪ್ರವಾದನೆಗಳು ಅಕ್ಷರಶಃವಾಗಿ ಮೆಸ್ಸೀಯನಲ್ಲಿ ನೆರವೇರಿತು. ಮೆಸ್ಸೀಯನು ತಾನೇ ಅನೇಕ ಸಂದರ್ಭಗಳಲ್ಲಿ, ತಾನು ಅನೇಕರ ವಿಮೋಚನಾರ್ಥವಾಗಿ (ಫಿದಾ) ತನ್ನ ಪ್ರಾಣವನ್ನು ಕೊಡಲು ಬಂದಿದ್ದೇನೆಂದು ತಿಳಿಸಿದ್ದಾನೆ. ತನ್ನ ಕುರಿತಾಗಿ ಆತನು ಹೇಳಿದ್ದೇನಂದರೆ

*ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ. ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು.* (5)

ಅಹಮದ್, ಸತ್ಯವೇದದ ಎಲ್ಲಾ ಕಡೆಯಲ್ಲೂ, ಮಾನವನ ಪಾಪ ವಿಮೋಚನೆಗಾಗಿ ಬಲಿಯಜ್ಞದ ಕುರಿತಾದ ಬೋಧನೆ ಅಡಕವಾಗಿದೆ ಎಂದು ಅರ್ಥವಾಯಿತೋ? ಅದು ಮೆಸ್ಸೀಯನ ಮೂಲಕವಾಗಿ ಹೇಗೆ ನೆರವೇರಿತು ಎಂದು ಅರಿತೆಯಾ?

"ಈ ವಿಷಯವನ್ನು ನಾನೆಂದೂ ಹಿಂದೆ ಕೇಳಿರಲಿಲ್ಲ. ಇದು ತುಂಬಾ ಆಸಕ್ತಿಯುತವಾಗಿದೆ. ನನಗೆ ಯೋಚಿಸಲು ಹೆಚ್ಚು ಸಮಯಬೇಕು. ಆದರೆ ಚಿಂತೆ ಇಲ್ಲ. ನಾನು ಇನ್ನೂ ಅನೇಕ ಪ್ರಶ್ನೆಗಳೊಂದಿಗೆ ನಿನ್ನ ಬಳಿ ಬರುತ್ತೇನೆ"

ಎಂದನು ಅಹಮದ್.

ಕಾಸಿಮ್ ಒಂದು ಸತ್ಯವೇದದ ಪ್ರತಿ ಅಹಮದನಿಗೆ ನೀಡುತ್ತಾ

"ಈ ಬೈಬಲನ್ನು ತೆಗೆದುಕೋ. ಇದೊಂದು ನಿನಗೆ ನನ್ನ ಬಹುಮಾನ. ಹೊಸಒಡಂಬಡಿಕೆಯಿಂದ ಓದಲು ಪ್ರಾರಂಭಿಸು. ಅಲ್ಲಿ ನಿನಗೆ ಮೆಸ್ಸೀಯನ ಜೀವಿತ ಹಾಗೂ ಆತನ ಆಶ್ಚರ್ಯಕರವಾದ ಅದ್ಭುತಕಾರ್ಯ ಮತ್ತು ಬೋಧನೆಗಳನ್ನು ನೋಡಬಹುದು."

ಬಹಳ ವಂದನೆಗಳು ಕಾಸಿಮ್. ನಾನು ಪುಸ್ತಕಗಳ ಜನರ (ಅಹಲ್ ಆಲ್-ಕಿತಾಬ್) ಕುರಿತು ಕೇಳಿದ್ದೇನೆ. ಆದರೆ ಆ ಪುಸ್ತಕವನ್ನು ನೇರವಾಗಿ ಓದಿರಲಿಲ್ಲ. ಮರಿಯಳ ಮಗನಾದ ಯೇಸುವಿನ ಬೋಧನೆ ಹಾಗೂ ಅದ್ಭುತ ಕಾರ್ಯಗಳ ಕುರಿತು ಓದಲು ಆಸೆಗೊಂಡಿದ್ದೇನೆ.

"ಆಳ್-ಸಲಾಮೋ-ಆಲೆಕುಮ್"

"ಆಲೆಕುಮ್-ಆಳ್-ಸಲಾಮ್"

(1) 1 ತಿಮೊಥೆ 2:5-6 (2) ಇಬ್ರಿಯರಿಗೆ 9:22 (3) ಯೇಶಾಯ 53:4-7 (4) ಕೀರ್ತನೆ 22:14-18 (5) ಮಾರ್ಕ10:45

## ಪಾಪ

ಅಂದು ಭೇಟಿ ಆದ ತಕ್ಷಣ ಅಹಮದ್

"ಕಾಸಿಮ್, ಮಾನವ ಜನಾಂಗದ ವಿಮೋಚನಾರ್ಥವಾಗಿ ಮೆಸ್ಸೀಯನು ಹೇಗೆ ತನ್ನ ಪ್ರಾಣವನ್ನು ಕೊಟ್ಟನು ಎಂಬುದನ್ನೇ ನಾನು ಯೋಚಿಸುತ್ತಿದ್ದೆನು. ಒಂದು ವಿಷಯ ನಾನು ತಿಳಿಯಬೇಕಿತ್ತು. ಪಾಪವು (ಆಳ್-ಖಟಿಯಾ) ಬಂದದೆಲ್ಲಿಂದ? ಮತ್ತು ಇಡೀ ಮಾನವ ಜನಾಂಗಕ್ಕೆ ಅದು ಸಮಸ್ಯೆ ಹೇಗಾಯಿತು? ದಯಮಾಡಿ ಹೇಳುವಿಯಾ?" ಎಂದು ಬಹು ಗಂಭೀರವಾದ ಧ್ವನಿಯಲ್ಲಿ ಕೇಳಿದನು.

"ಹೌದು! ನಾನು ಅದನ್ನೇ ಯೋಚಿಸುತ್ತಿದ್ದೆನು" ಕಾಸಿಮ್ ಆಲೋಚನಾಪರನಾಗಿ ಉತ್ತರಿಸಿದನು.

"ನಾವು ಈ ಪಾಪ ಎಲ್ಲಿಂದ ಪ್ರಾರಂಭವಾಯಿತೆಂದು ಆರಂಭದಿಂದ ತಿಳಿಯಬೇಕಾದದ್ದು ಒಳ್ಳೆಯದು. ಪಂಚಕಾಂಡದಲ್ಲಿ (ತವ್‌ರಹ್) ದೇವರು ಲೋಕವನ್ನೂ, ಮಾನವನನ್ನೂ ಉಂಟು ಮಾಡಿ ಅವರನ್ನು ಪರದೈಸಿನಲ್ಲಿ (ಜನತ್) ಇಟ್ಟನು. ಅಲ್ಲಿ ಪರದೈಸಿನಲ್ಲಿ ಮಾನವನು ಸ್ವಚ್ಛನಾಗಿ ಅಂದರೆ ಪಾಪವಿಲ್ಲದವನಾಗಿ ದೇವರೊಟ್ಟಿಗೆ ಪರಿಪೂರ್ಣವಾದ ಸಂಬಂಧವನ್ನಿಟ್ಟುಕೊಂಡಿದ್ದನು. ನಿನಗೆ ಗೊತ್ತಿರುವಂತೆ ಪರದೈಸಿನಲ್ಲಿ ಜೀವನವನ್ನು ಹಾಳು ಮಾಡಿಕೊಳ್ಳುವ ಕಾರ್ಯವುಂಟಾಯಿತು. ಹೌದಲ್ಲವೇ ಅಹಮದ್? ಏನಾಯಿತೆಂದು ಹೇಳು ನೋಡೋಣ?"

"ಸೈತಾನನು ಬಂದು ಎಲ್ಲವನ್ನೂ ಹಾಳು ಮಾಡಿದನು"

"ಸರಿಯಾಗಿ ಹೇಳಿದಿ, ದೇವರು ಆದಾಮನಿಗೆ ಒಳ್ಳೇದರ ಮತ್ತು ಕೆಟ್ಟದರ ಅರಿವು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ಹೇಳಿದಾಗ್ಯೂ ಅವನು ಆ ಹಣ್ಣನ್ನು ತಿಂದನು."

*"ಇದಲ್ಲದೆ ಯೆಹೋವದೇವರು ಆ ಮನುಷ್ಯನಿಗೆ ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು. ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು. ತಿಂದ ದಿನ ಸತ್ತೇ ಹೋಗುವಿ."* **(1)**

"ಆದರೆ ಸೈತಾನನು ಹಾವಿನ ರೂಪದಲ್ಲಿ ಬಂದು ಆದಾಮ ಹವ್ವರನ್ನು ಪರಿಶೋಧಿಸಿದನು. ಅವರು ದೇವರಿಗೆ ಅವಿಧೇಯರಾಗಿ ಆ ಹಣ್ಣನ್ನು ತಿಂದರು. ಅದರ ಫಲ, ಮಾನವ ಜನಾಂಗಕ್ಕೆ ಶಾಪ ಬಂದದ್ದೇ ಆಯಿತು. ಪಾಪವು ಮಾನವ ಜೀವಿತಕ್ಕೆ ಹೊಕ್ಕಾಗ ಪ್ರತಿ ಒಬ್ಬೊಬ್ಬರೂ ಪಾಪಿಗಳಾಗಬೇಕಾಯಿತು".

ಅಹಮದನು ಸಂದೇಹದ ಧ್ವನಿಯಲ್ಲಿ "ಪ್ರತೀ ಒಬ್ಬೊಬ್ಬನೂ ನಿಜವಾದ ಪಾಪಿಗಳಾದರೋ? ಇದನ್ನು ಒಪ್ಪಿಕೊಳ್ಳಲು ನನಗೆ ಕಷ್ಟವಾಗಿದೆ. ಒಂದು ವೇಳೆ ಅದು ನಿಜವಾದಲ್ಲಿ ಪ್ರತೀ ಒಬ್ಬೊಬ್ಬರೂ ಪಾಪಿಗಳಾದದ್ದು ಹೇಗೆ?"

ಕಾಸಿಮ್ ಶಾಂತ ಸ್ವರದಲ್ಲಿ "ಮಾನವ ಜನಾಂಗ, ಅವನು ತಿಂದ ಹಣ್ಣಿನಂತೆ ಅವನು ಒಂದು ವಿಲಕ್ಷಣವಾದ ಒಳ್ಳೇಯ ಮತ್ತು ಕೆಟ್ಟ ಮಿಶ್ರಣದಂತಾಗಿ ಹೋದ. ಕೆಲವು ವೇಳೆ ಒಬ್ಬ ವ್ಯಕ್ತಿ ಒಂದು ಶ್ರೇಷ್ಠವಾದ ಒಳ್ಳೇ ಕೆಲಸ ಮಾಡಬಹುದು. ಎಲ್ಲರೂ ಮೆಚ್ಚುವಂತ ಸೇವಾಕಾರ್ಯ ಮಾಡಬಹುದು. ನಂತರ ಮರುಗಳಿಗೆಯಲ್ಲಿ ಅವನು ಕೆಟ್ಟಕೆಲಸಗಳಾದ ದ್ರೋಹ, ವಂಚನೆ, ತಮ್ಮ ನೆರೆಹೊರೆಯವರಿಗೆ ಮೋಸ ಕೂಡ ಮಾಡಬಹುದು. ಒಂದು ನಿಮಿಷ ಒಬ್ಬ ಪ್ರೀತಿಯುಳ್ಳವನೂ ಮತ್ತು ದಯಾಪೂರ್ಣನೂ ಆಗಿರಬಹುದು. ಮರು ನಿಮಿಷದಲ್ಲಿ ದ್ವೇಷ, ಸ್ವಾರ್ಥ, ದುರಾಶೆ ಅಥವಾ ಪಾಪಮಯವಾದ ಇನ್ನಿತರ ಗುಣಗಳಿಂದ ತುಂಬಿದವನಾಗಿ ಹೋಗಬಹುದು. ನೀನು ಹೇಳಿದ ಹಾಗೆ ಅಹಮದ್, ಪ್ರತೀ ಒಬ್ಬ ವ್ಯಕ್ತಿಯೂ

ಈ ಸಮಸ್ಯೆಯೊಳಗೆ ಸಿಕ್ಕಿ ಒದ್ದಾಡುತ್ತಿದ್ದಾನೆ. ಪ್ರತೀ ದೇಶವೂ ಈ ಪಾಪದಿಂದುಟಾಗುವ ಕಾರ್ಯಗಳನ್ನು ಹತೋಟಿಗೆ ತರಲು ಕಾನೂನುಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಮತವೂ ಈ ಸಮಸ್ಯೆಯ ಕುರಿತು ಕಾರ್ಯವೆಸಗುತ್ತಾ ಇವೆ. ಒಂದು ದುರಾದೃಷ್ಟ ಸಂಗತಿ ಏನಂದರೆ ಜನರು ಪಾಪ ಮಾಡಿದ್ದರಿಂದ ಮಾತ್ರ ಪಾಪಿಗಳಲ್ಲ. ಆದರೆ ಅವರು ಪಾಪಿಗಳಾಗಿರುವುದರಿಂದ ಪಾಪ ಮಾಡುತ್ತಾರೆ. ಅಂದರೆ ಜನರೊಳಗೆ ಒಂದು ಚಿಕ್ಕ ಕಾರ್ಖಾನೆಯಿದ್ದು ಅದರಿಂದ ಪಾಪ ಮತ್ತು ದುಷ್ಟತನ ಉತ್ಪತ್ತಿಯಾಗುತ್ತದೆಂದಾಯಿತು. ಅಲ್ಲವೇ?" ಎಂದು ಕಾಸಿಮ್ ಹೇಳುತ್ತಾ ಅಹಮದನನ್ನು ಪರೀಕ್ಷಾ ದೃಷ್ಟಿಯಿಂದ ನೋಡಿದನು.

ನಾನು ಹೀಗೆ ಹೇಳುವುದಕ್ಕೆ ನನ್ನನ್ನು ಕ್ಷಮಿಸು. ನೀನು ಮಾನವ ಕುಲದ ಬಗ್ಗೆ ಕೊಟ್ಟ ವಿವರಣೆ ನಿಜವಾಗಿಯೂ ಸತ್ಯ ಹಾಗೂ ಕರುಣಾದಾಯಕವಾಗಿದೆ. ನಿಜವಾಗಿಯೂ ಜನರು ಒಳ್ಳೆಯದರ ಹಾಗೂ ಕೆಟ್ಟದರ ಮಿಶ್ರಣವಾಗಿದ್ದಾರೆ.

ಆದರೆ ಈ ದೃಶ್ಯಕ್ಕೆ ಸೈತಾನನು ಹೇಗೆ ಸೂಕ್ತ ವ್ಯಕ್ತಿಯಾಗಿದ್ದಾನೆ.

"ಹೌದು, ಪಾಪದ ಮೂಲಕ ಸೈತಾನನು ಮಾನವನಲ್ಲಿ ಮತ್ತು ಸಮಾಜದಲ್ಲಿ ಅಧಿಕಾರ ಪಡೆದುಕೊಂಡನು. ಒಮ್ಮೆ ಅವನು ಅದಾಮನನ್ನೂ ಹವ್ವಳನ್ನೂ ವಂಚಿಸಿ, ಈಗ ಅದೇ ಕೆಲಸವನ್ನು ಇಂದೂ ಮುಂದುವರಿಸಿಕೊಂಡು ಬರುತ್ತಲೇ ಇದ್ದಾನೆ. ನಾವು ಪಾಪದಲ್ಲೇ ಮುಂದುವರಿದುಕೊಂಡು ಹೋಗುವಂತೆ ಈಗಲೂ ನಮ್ಮನ್ನು ವಂಚಿಸುತ್ತಲೇ ಇದ್ದಾನೆ. ಪಾಪದ ಮೂಲಕವಾಗಿಯೇ ಜನರ ಜೀವಿತದಲ್ಲಿ ಅಧಿಕಾರ ಸ್ಥಾಪಿಸಿ ಅದೇ ಪಾಪ ನಮ್ಮನ್ನು ದೇವರಿಂದ ಬೇರ್ಪಡಿಸಿದೆ. ಪಾಪದ ದೆಸೆಯಿಂದಲೇ ಪ್ರಪಂಚವು ಈ ದಿನದಲ್ಲಿ ಈ ತೆರನಾಗಿ ಇದೆ. ದೇವರು ಎಲ್ಲವನ್ನೂ ಒಳ್ಳೇದಾಗಿ ಉಂಟು ಮಾಡಿದನು. ಆದರೆ ಮಾನವನು ಕೆಟ್ಟದರ ಮುಖಾಂತರ ಪ್ರಪಂಚ ನಡೆಸತೊಡಗಿದನು. ಉದಾಹರಣೆಗೆ, ಯುದ್ಧದಿಂದ, ಶೋಷಣೆಯಿಂದ, ಮುರಿದ ಸಂಬಂಧದಿಂದ **(Broken relationship)** ಮತ್ತು ಇನ್ನೂ ಎಷ್ಟೋ ವಿಧಗಳ ದುಃಖದಿಂದ ತುಂಬಿಸಿ, ಮಾನವನ ಜೀವಿತ ನಾಶವಾಗುತ್ತಾ ಇದೆ."

"ಹಾಗಾದರೆ ದೇವರು ನಮ್ಮನ್ನು ಹೀಗೆ ಉಂಟು ಮಾಡಲಿಲ್ಲವೆಂದು ಹೇಳುತ್ತೀಯೋ? ಆದಾಮನ ಪಾಪದ ದೆಸೆಯಿಂದ ಪ್ರಪಂಚ ಹೀಗಾಯಿತೆನ್ನುತ್ತೀಯೋ?"

"ಸರಿಯಾಗಿ ಹೇಳಿದಿ, ಪಾಪವು ಆದಾಮನ ಮೂಲಕ ಹರಿದು ಬಂತು ಎಂದು ಬರೆಯಲ್ಪಟ್ಟಿದೆ."

*ಹೇಗೆಂದರೆ ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು.* (2)

ಇದರ ಘೋರ ಫಲಿತಾಂಶ ಮರಣವೇ. ಇದು ಶಾರೀರಿಕ ಮತ್ತು ಆತ್ಮೀಕ ಮರಣವಾಗಿದೆ.

"ಏನು? ಶಾರೀರಿಕ ಮತ್ತು ಆತ್ಮೀಕ ಮರಣ?" ಅಹಮದನು ಆಶ್ಚರ್ಯದಿಂದ ಕೇಳಿದನು.

"ಆತ್ಮೀಕ ಮರಣ ಅಂದರೆ ಸರಿಯಾದ ಅರ್ಥ ಏನು?"

"ದೇವರು ಮಾನವನಿಗೆ ಆ ಹಣ್ಣನ್ನು ತಿಂದರೆ ಖಂಡಿತಾ ಸಾಯುವಿ ಎಂದು ಹೇಳಿದನು".

ಕಾಸಿಮನು ಸಾವಕಾಶದಿಂದ ಹೇಳಲು ಪ್ರಾರಂಭಿಸಿ "ದೇವರು ನೀತಿವಂತನಾಗಿರುವ ಪ್ರಯುಕ್ತ ಮತ್ತು ತನ್ನ ಮಾತಿನಂತೆ ಯಾವಾಗಲೂ ನಡೆಯುವವನಾದ್ದರಿಂದ, ಮರಣವು ಮಾನವನ ಮೇಲೆ ಬಂದು ಎಲ್ಲಾ ಜನರೂ ಸಾಯಬೇಕಾಗಿ ಬಂತು. ಆದರೆ ಮಾನವನು ಆತ್ಮೀಯ ರೀತಿಯಲ್ಲಿ ಸಹ ಪಾಪ ಮಾಡಿದ್ದರಿಂದ ಸಾಯಬೇಕಾಯಿತು"

"ಹೇಗೆ?"

"ಪಾಪದ ಫಲಿತಾಂಶ ಮಾನವನು ಪರದೈಸಿನಿಂದ ಓಡಿಸಲ್ಪಟ್ಟನು. ಶುದ್ಧತ್ವದಿಂದ, ಪರಿಪೂರ್ಣತೆಯಿಂದ ದೇವರೊಟ್ಟಿಗಿನ ಒಳ್ಳೆಯ ಸಂಬಂಧದಿಂದ ಮನುಷ್ಯನು ದೂರ ಎಳೆಯಲ್ಪಟ್ಟನು. ಪರದೈಸಿನಿಂದ ಹೊರಗೆ ಜೀವಿಸಬೇಕಾಯಿತು. ಪಾಪದ ದೆಸೆಯಿಂದ ಮಾನವನು ಜೀವಿಸುವ ಪರಿಶುದ್ಧ

ದೇವರಿಂದ ಬೇರ್ಪಟ್ಟನಂತರ ಆತ್ಮೀಯ ರೀತಿಯಲ್ಲಿ ಸಾಯಬೇಕಾಯಿತು. ಹೀಗೆ ಪಾಪವೂ, ಕೆಟ್ಟತನವೂ ದೇವರಿಂದ ಮಾನವನನ್ನು ಬೇರ್ಪಡಿಸಿತು. ಪಾಪದ ದೆಸೆಯಿಂದ ನಾವು ನಾವಾಗಿಯೇ ದೇವರೊಡನೆ ಹತ್ತಿರದ ಸಂಬಂಧವಿರಿಸಿ ಜೀವಿಸಲು ಸಾಧ್ಯವಿಲ್ಲ. ದೇವರು ಶುದ್ಧನೂ, ಪರಿಶುದ್ಧನೂ ಆಗಿದ್ದು ಪಾಪದ ಜತೆ ಯಾವ ರೀತಿಯೂ ಹೊಂದಾಣಿಕೆ ಮಾಡಿಕೊಳ್ಳುವವನಲ್ಲ. ಇದಕ್ಕಾಗಿಯೇ ನಮಗೆ ಒಬ್ಬ ರಕ್ಷಕನ (ಮೊನಾಜಿ) ಅವಶ್ಯಕತೆ ಇದ್ದು, ನಮ್ಮ ಪಾಪಗಳ ದೆಸೆಯಿಂದಾಗುವ ಪರಿಣಾಮಗಳಿಂದ ನಮ್ಮನ್ನು ರಕ್ಷಿಸುವವನಾಗಿರಬೇಕು. ಅಹಮದ್, ನಿನ್ನ ಎಲ್ಲಾ ಪಾಪಗಳೂ ಒಂದು ಕಡೆ ಬರೆಯಲ್ಪಟ್ಟಿವೆ ಎಂದು ನಂಬುತ್ತೀಯೋ?"

ಅಹಮದನು ಕಳವಳ ತುಂಬಿದವನಾಗಿ

"ನಮ್ಮ ಪ್ರತೀ ಒಬ್ಬೊಬ್ಬನ ಹಿಂದೆ ಹಿಂಬಾಲಿಸುವ ಇಬ್ಬರು ದೇವದೂತರು ನಮ್ಮ ಪಾಪಗಳ ಕುರಿತು ಬರೆದಿಡುತ್ತಾರೆಂದು ನನಗೆ ಗೊತ್ತು".

ನಮ್ಮ ವಿಷಯದಲ್ಲಿ ದೇವರಿಗೆ ಪ್ರತೀ ಒಂದೊಂದು ಅಂಶವೂ ತಿಳಿಯುತ್ತದೆ. ಪ್ರತೀ ಒಳ್ಳೇ ಕಾರ್ಯಗಳೂ, ಕೆಟ್ಟ ಕಾರ್ಯಗಳೂ, ನಾವಾಡುವ ಪ್ರತೀ ಮಾತೂ, ಪ್ರತೀ ಯೋಚನೆ, ಪ್ರತೀ ಉದ್ದೇಶ (ನೆಯ) ದೇವರಲ್ಲಿ ಬರೆದು ಇಡಲ್ಪಟ್ಟಿದೆ. ನ್ಯಾಯತೀರ್ಪಿನ (ಯ್ಯಾಮ್ ಅಲ್ ಹಿಸಾಬ್) ದಿನದಲ್ಲಿ ತಕ್ಕಡಿ ಯಾವ ಕಡೆ ವಾಲುತ್ತದೆ ಎಂಬುದು ನಿನಗೆ ಗೊತ್ತೋ?

"ಇಲ್ಲ. ದೇವರಿಗೆ ಮಾತ್ರ ಗೊತ್ತು."

ಅಹಮದ್ ಕ್ಷೀಣ ಧ್ವನಿಯಲ್ಲಿ ಹೇಳಿದ.

"ದೇವರು ನನ್ನನ್ನು ಪ್ರೀತಿಸುತ್ತಾನೆ ಅಹಮದ್. ದೇವರ ಕುರಿಮರಿಯಾದ ಮರಿಯಳ ಮಗನಾದ ಯೇಸುವು ನಮ್ಮ ಪಾಪಗಳನ್ನು ತನ್ನ ಮೇಲೆ ಹಾಕಿಕೊಂಡನೆಂಬುದನ್ನು ಮರೆಯಬೇಡ. ಪ್ರತೀ ಒಂದಕ್ಕೂ ಕ್ಷಮಾಪಣೆ ದೊರಕುತ್ತದೆ".

ಅವನ ಮಾತುಗಳಿಗೆ ಅಹಮದ್ ಸ್ವಲ್ಪ ಹೊತ್ತು ಮೌನವಾಗಿದ್ದು ನಂತರ ಹೇಳುತ್ತಾನೆ.

"ಮೆಸ್ಸೀಯನು ಅಷ್ಟೊಂದು ಪ್ರಾಮುಖ್ಯವಾಗಿದ್ದರೆ ಆದಾಮಹವ್ವರು ಯಾಕೆ ಆತನ ವಿಷಯ ತಿಳಿದಿರಲಿಲ್ಲ".

"ಅವರು ಮೆಸ್ಸೀಯನ ಕುರಿತು ಕೇಳಿದ್ದರೆಂದು ನಾನು ಹೇಳಿದರೆ ನೀನು ನಂಬುತ್ತೀಯೋ ಅಹಮದ್?"

"ಇಲ್ಲ ಸಾಧ್ಯವೇ ಇಲ್ಲ. ಅವರು ಮೆಸ್ಸೀಯನ ಕುರಿತು ಕೇಳಿರಲು ಸಾಧ್ಯವೇ ಇಲ್ಲ".

"ದೇವರು ಮಾನವನನ್ನು ಪ್ರೀತಿಸುತ್ತಾನೆ ಮತ್ತು ಅವನೊಡನೆ ಸಂಬಂಧವಿರಿಸಿಕೊಳ್ಳಲು ಆಶಿಸುತ್ತಾನೆ. ಆದುದರಿಂದಲೇ ಮೆಸ್ಸೀಯನ ಕುರಿತು ಆರಂಭದಿಂದಲೇ ಹೇಳುತ್ತಾ ಬಂದನು. ಆ ದುಃಖಕರವಾದ ಘಟನೆಯಿಂದ ಅವರು ಅವಿಧೇಯರಾದ ಸಂದರ್ಭದಲ್ಲೇ ದೇವರು ಅವರಿಗೆ ರಕ್ಷಕನ ಕುರಿತಾದ ವಾಗ್ದಾನವನ್ನು ತಿಳಿಸಿದ್ದರು. ಒಂದು ದಿನ ಈ ರಕ್ಷಕನು ಮಾನವನ ಮೇಲಿನ ಸೈತಾನನ ಅಧಿಕಾರವನ್ನು ಜಜ್ಜುವನು ಎಂಬುದಾಗಿ ಆದಾಮಹವ್ವರು ಕೇಳಿಸಿಕೊಳ್ಳುವಂತೆ ಹೇಳಿದನು."

*ನಿನಗೂ ಈ ಸ್ತ್ರೀಗೂ ನಿನ್ನ ಸಂತಾನಕ್ಕೂ ಈ ಸ್ತ್ರೀ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು. ನೀನು ಅದರ ಹಿಮ್ಮಡಿಯನ್ನು ಕಚ್ಚುವಿ.* (3)

"ಇಡೀ ಸತ್ಯವೇದದಲ್ಲಿ ಗಂಡುಮಕ್ಕಳು ಅವರವರ ತಂದೆಗಳ ಹೆಸರುಗಳ ಮೇಲೆ ಕರೆಯಲ್ಪಟ್ಟರು. ಅಬ್ರಹಾಮನ ಮಗ ಯಾಕೋಬನ ಮಗ ಹೀಗೆ. ಆದರೆ ಸತ್ಯವೇದವು ಸ್ತ್ರೀಸಂತಾನ ಎಂದು ಹೇಳುತ್ತದೆ. ಗಂಡಸಿನ ಎಂಬುದಾಗಿ ಹೇಳಿಲ್ಲ. ಆದರೆ ಸ್ತ್ರೀ ಮಗ ಎಂಬುದಾಗಿದೆ. ಈ ಸ್ತ್ರೀ ಮಗ ಸೈತಾನನ ಮಾನವನ ಮೇಲಿನ ಅಧಿಕಾರವನ್ನು ಜಜ್ಜುವನು. ಸೈತಾನನು ಹಾವಿನ ಹಾಗೆ ಹಿಮ್ಮಡಿಯನ್ನು ಕಚ್ಚುವುದರ ಮೂಲಕ ಈ ಸ್ತ್ರೀಯ ಮಗನನ್ನು ಕೊಲ್ಲಲು ಹವಣಿಸುತ್ತಾನೆ. ಮಾನವನ ಪಾಪದ ವಿಮೋಚನಾರ್ಥವಾಗಿ ತನ್ನನ್ನೇ ಒಪ್ಪಿಸಿ ಕೊಟ್ಟ ಮರಿಯಳ ಮಗನಾದ ಯೇಸುವಿಗೆ ಇದೇ ಆದದ್ದು ಅಲ್ಲವೇ?"

"ಅದ್ಭುತ" ಅಹಮದನು ಆಶ್ಚರ್ಯದಿಂದ "ಭೂಮಿಯ ಮೊದಲನೇ ಜನರಿಗೆ ದೇವರು ಮೆಸ್ಸೀಯನ ಕುರಿತಾಗಿ ಹೇಳಿದ್ದು ಅತ್ಯದ್ಭುತ. ಇದು ಮತ್ತೆ ಸತ್ಯವೇದದ ಮುಖ್ಯ ಗುರಿ. ಖಂಡಿತವಾಗಿ ಮೆಸ್ಸೀಯನನ್ನೇ ಕುರಿತು ಆಗಿದೆ. ಮುಂದಿನ ಸಾರಿ ನಾವು ಭೇಟಿ ಮಾಡುವ ತನಕ ಯೋಚಿಸಲು ಬಹಳ ಸಂಗತಿಗಳನ್ನು ತಿಳಿಸಿದ್ದಕ್ಕಾಗಿ ನಿನಗೆ ವಂದನೆಗಳು ಕಾಸಿಮ್.

ಆಲ್-ಸಲಾಮೋ ಆಲೇಕುಮ್

ಆಲೇಕುಮ್ ಆಲ್ ಸಲಾಂ.

(1) ಆದಿಕಾಂಡ 2:16-17 (2) ರೋಮಾಪುರದವರಿಗೆ 5:12
(3) ಆದಿಕಾಂಡ 3:15

## ಅಬ್ರಹಾಮನ ಮಗ

"ನಿನಗೆ ಸುವಾರ್ತೆ (ಆಲ್ ಏಂಜೆಲ್)ಯು ಹೇಗೆ ತೋರುತ್ತದೆ ಎಂದು ತಿಳಿಯಲು ನಾನು ಕುತೂಹಲಗೊಂಡಿದ್ದೇನೆ" ಎಂಬ ಕಾಸಿಮನ ಮಾತಿಗೆ ಅಹಮದ್ ಯಥಾರ್ಥದ ಧ್ವನಿಯಲ್ಲಿ "ಇದೊಂದು ಖಂಡಿತವಾಗಿ ಅದ್ಭುತವಾದ ಪುಸ್ತಕ. ಈ ರೀತಿಯ ಪುಸ್ತಕ ನಾನು ಓದಿರಲಿಲ್ಲ. ಮೆಸ್ಸೀಯನ ಅದ್ಭುತಗಳ ವಿವರಗಳನ್ನು ಓದುವುದು ಆಹ್ಲಾದಕರವಾಗಿದೆ. ಅದರಲ್ಲೂ ಪರ್ವತಗಳ ಮೇಲಿಂದ (ಪರ್ವತ ಪ್ರಸಂಗ) ಮಾಡಿದ ಉಪದೇಶ ಬಹು ವಿಶೇಷವಾದದ್ದು. ಆದರಲ್ಲಿ ಬಹಳ ಆಳವಾದ ಮತ್ತು ಸ್ಪಷ್ಟತೆಯ ಅರ್ಥ ಇದೆ. ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರ ಹತ್ತಿರ ಪ್ರಾರ್ಥಿಸಿರಿ ಎಂದು ಹೇಳುವದರ ಮೂಲಕ ಅನೇಕ ಭಾವನೆ, ನಂಬಿಕೆಗಳನ್ನು ತಲೆ ಕೆಳಗೆ ಮಾಡಿದ್ದಾನೆ. ನಾನು ಹಿಂದೆ ಹೇಳಿದವುಗಳಿಗಿಂತ ಭಿನ್ನವಾಗಿ ಪ್ರಾರ್ಥನೆಯ ಕುರಿತಾಗಿ ಬೋಧಿಸಿದ್ದಾನೆ. ಈ ಪುಸ್ತಕವು ನನ್ನಲ್ಲಿ ಆಳವಾದ ಪ್ರಭಾವ ಬೀರಿದೆ ಎಂಬುದನ್ನು ಒಪ್ಪಿಕೊಳ್ಳಬೇಕಿದೆ. ಇದರ ಜತೆಗೆ ನನ್ನಲ್ಲಿದ್ದ ಅನೇಕ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದೆ.

"ಬಹಳ ಆಸಕ್ತಿಯುತವಾಗಿದೆ. ನಿನ್ನ ಪ್ರಥಮ ಪ್ರಶ್ನೆಯಿಂದಲೇ ಪ್ರಾರಂಭಿಸುವ." ಕಾಸಿಮನು ಹೇಳುತ್ತಾ ಕುಳಿತು ಕೊಳ್ಳುತ್ತಾರೆ.

ಅಹಮದನು ತನ್ನ ಮೊದಲನೇ ಪ್ರಶ್ನೆಯನ್ನೇ ಮತ್ತೆ ಹಾಕುತ್ತಾನೆ. "ಸುವಾರ್ತೆಯ

ಪ್ರಾರಂಭದಲ್ಲಿ ವಂಶಾವಳಿಗಳಿಂದ ಆರಂಭಿಸಿ ಅಬ್ರಹಾಮನಿಂದ ದಾವೀದನವರೆಗೆ ಮತ್ತು ದಾವೀದನಿಂದ ಮೆಸ್ಸೀಯನ ವರೆಗೆ ಯಾಕೆ ಬರೆಯಲ್ಪಟ್ಟಿತು?''

ಕಾಸಿಮ್ ಸ್ವಲ್ಪ ತಡೆದು "ನಾವು ಹಿಂದೆ ಮಾತಾಡಿದ್ದು ನೆನಪಿದೆಯಾ ಸತ್ಯವೇದವು ಒಂದಾಗಿ ಸೇರಿಸಲ್ಪಟ್ಟ ಒಂದು ಘಟಕದಂತಿದ್ದು ಇಡೀ ಪುಸ್ತಕದಲ್ಲಿ ಆ ಒಂದು ಪ್ರತ್ಯೇಕವಾದ ಗುರಿಯು ಹರಡಿ ಕೊಂಡಿದೆ."

"ಹೌದು ನನಗೆ ನೆನಪಿದೆ"

"ಆ ಮುಖ್ಯವಾದ ಗುರಿ ಏನೆಂದು ನಿನಗೆ ನೆನಪುಂಟೋ?"

"ಅಲ್-ಮಸ್ಸೀಹ" (ಮೆಸ್ಸೀಯನು)

"ನಿನ್ನ ಪ್ರಶ್ನೆಗೆ ಉತ್ತರ ಈ ಮುಖ್ಯ ಗುರಿಗೆ ಸಂಬಂಧಿಸಿದ್ದು. ಪ್ರವಾದಿಗಳ ಪ್ರಕಾರ ಮೆಸ್ಸೀಯನು ದಾವೀದನ ಮಗನೂ ಅಬ್ರಹಾಮನ ಮಗನೂ ಆಗಿರಬೇಕಿತ್ತು".

ಕಾಸಿಮ್ ತನಗೆ ಹೇಳಿದವುಗಳನ್ನು ಕುರಿತು ಅಹಮದನು ಯೋಚಿಸಿ ನೋಡಿ "ನೀನು ಹೇಳುವುದು ಆಸಕ್ತಿಯುತವಾಗಿದೆ. ಆದರೆ ಅದಕ್ಕೆ ಸಂಬಂಧಿಸಿದ ಬೇರೆ ಬೇರೆ ಪ್ರವಾದನೆಗಳುಂಟೋ?''

"ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಒಂದು ದಿನ ದೇವರು ಅಬ್ರಹಾಮನ ಕೂಡ ಮಾತನಾಡಿದನು. (ಅವನನ್ನು ದೇವರ ಸ್ನೇಹಿತ ಕಲೀಲ್ ಅಲ್ಲಾಹ್ ಎಂದು ಕರೆಯಲ್ಪಟ್ಟಿತು) ಆಗ ಅಬ್ರಹಾಮನು ಇನ್ನೂ ಅಬ್ರಾಮನಾಗೇ ಕರೆಯಲ್ಪಡುತ್ತಿದ್ದನು. ಇಡೀ ಮಾನವ ಜನಾಂಗಕ್ಕೆ ಒಂದು ಗುರುತಾಗಿರುವಂತೆ ದೇವರು ಅವನಿಗೊಂದು ವಾಗ್ದಾನ ಕೊಟ್ಟನು. ಅದನ್ನು ಪಂಚಕಾಂಡಗಳಲ್ಲಿ (ತಾಹ್‌ರಾಹ್) ಓದುತ್ತೇವೆ.

*"ಯೆಹೋವನು ಅಬ್ರಹಾಮನಿಗೆ ನೀನು ಸ್ವದೇಶವನ್ನೂ, ಬಂಧುಬಳಗವನ್ನೂ, ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ*

*ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದ ನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು. ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವದು ಎಂದು ಹೇಳಿದನು*". (1)

"ಮದುವೆ ಆಗಿ ಬಹಳಷ್ಟು ವರುಷಗಳು ಕಳೆದರೂ ಮಕ್ಕಳೇ ಆಗದಿದ್ದ ಮನುಷ್ಯನನ್ನು ದೇವರು ಕರೆದನು. ದೇವರು ಅವನಿಗೆ ದೇಶದ ವಾಗ್ದಾನ ಮಾಡಿದನು. ದೇವರು ಅವನನ್ನು ದೊಡ್ಡ ಜನಾಂಗವಾಗುವಂತೆ ಮಾಡಲು ಅವನ ಹೆಸರನ್ನು ಪ್ರಖ್ಯಾತಿಗೆ ತರಲೂ ವಾಗ್ದಾನ ಮಾಡಿದನು. ದೇವರು ಇವೆಲ್ಲವನ್ನೂ ವಿವರವಾಗಿ ನೆರವೇರಿಸಿದನು. ಆದರೆ ಈ ಎಲ್ಲಾ ವಾಗ್ದಾನಗಳಲ್ಲಿ ಬಹಳ ಪ್ರಾಮುಖ್ಯವಾದದ್ದು ಅಬ್ರಹಾಮನ ಮೂಲಕ ದೇವರು ಎಲ್ಲಾ ಕುಲದವರನ್ನೂ ಆಶೀರ್ವದಿಸುತ್ತೇನೆಂಬ ವಾಗ್ದಾನವೇ. ಈ ವಾಗ್ದಾನದಲ್ಲಿ ಮೆಸ್ಸೀಯನ ವಿಷಯವೂ ಅಡಕವಾಗಿದೆ. ಆದುದರಿಂದ ಮೆಸ್ಸೀಯನು ಅಬ್ರಹಾಮನ ಮಗನಾದನು. ಅವನ ಮೂಲಕವಾಗಿ ಇಡೀ ಭೂಲೋಕಕ್ಕೆ ಆಶೀರ್ವಾದ ದೇವರು ದಯಪಾಲಿಸುವವನಾದನು."

"ಆ ವಾಗ್ದಾನವು ಮೆಸ್ಸೀಯನ ಕುರಿತಾಗಿಯೇ ಹೊರತು ಬೇರೆಯವರ ಕುರಿತಾಗಿ ಅಲ್ಲ ಎನ್ನುವ ಖಾತರಿ ಏನು?" ಅಹಮದನು ಸಂದೇಹದಿಂದ ಕೇಳಿದನು.

"ತಹ್‌ರಹ್ (ಪಂಚಕಾಂಡಗಳು)ಯನ್ನು ಮುಗಿಸಿ ಮುಂದೆ ಮುಂದೆ ಓದುವಾಗ ಅದು ಸ್ಪಷ್ಟವಾಗಿ ತೋರಿ ಬರುತ್ತದೆ. ಆ ಸಮಯದಲ್ಲಿ ಅಬ್ರಹಾಮನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಒಬ್ಬನು ತನ್ನ ಹೆಂಡತಿ ಸಾರಳ ಮಗ ಇಸಾಕನು (ಇಶ್ಯಾಖ್) ಮತ್ತೊಬ್ಬನು ತನ್ನ ಹೆಣ್ಣಾಳು ಹಾಗರಳ (ಹಜಾರ್) ಮಗ ಇಸ್ಮಾಯೇಲ್ (ಇಷ್ಮಾಯಿಲ್), ದೇವರು ಇಸ್ಮಾಯೇಲನನ್ನು ಆಶೀರ್ವದಿಸಿದರೂ ದೇವರು ತನ್ನ ಚಿತ್ತವನ್ನು ಅಬ್ರಹಾಮನಿಗೆ ಸ್ಪಷ್ಟ ಪಡಿಸಿದ್ದನು. ಅದನ್ನು ಇಸಾಕನು ಹುಟ್ಟುವ ಮೊದಲೇ ತಿಳಿಸಿದ್ದನು. ಮೆಸ್ಸೀಯನ ಕುರಿತಾದ ವಾಗ್ದಾನವು ಇಸಾಕನಿಂದಲೇ ನೆರವೇರಲ್ಪಡುವದೆಂದು ಹೇಳಿದ್ದನು.

"ದೇವರೇ ನಿನ್ನ ಪತ್ನಿಯಾದ ಸಾರಳಲ್ಲಿಯೇ ನಿನ್ನಿಂದ ಮಗನು ಹುಟ್ಟುವನು. ಅವನಿಗೆ ಇಸಾಕನೆಂದು ಹೆಸರಿಡಬೇಕು. ಅವನ ಸಂಗಡ ನನ್ನ ಒಡಂಬಡಿಕೆಯನ್ನು ಸ್ಥಾಪಿಸಿಕೊಳ್ಳುವೆನು. ಅದು ಅವನ ಸಂತತಿಯವರಲ್ಲಿಯೂ ಶಾಶ್ವತವಾಗಿರಬೇಕು. ಇಷ್ಮಾಯೇಲನ ವಿಷಯದಲ್ಲಿ ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ. ಅವನನ್ನು ಆಶೀರ್ವದಿಸಿದ್ದೇನೆ. ಅವನನ್ನು ಅಭಿವೃದ್ಧಿ ಮಾಡಿ ಅವನಿಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು. ಅವನಿಂದ ಹನ್ನೆರಡು ಮಂದಿ ಅರಸರನ್ನು ಪಡೆಯುವನು. ಅವನಿಂದ ದೊಡ್ಡ ಜನಾಂಗವಾಗುವಂತೆ ಮಾಡುವೆನು. ಆದರೆ ಆ ನನ್ನ ಒಡಂಬಡಿಕೆಯನ್ನು ಇಸಾಕನ ಸಂಗಡಲೇ ಸ್ಥಾಪಿಸಿಕೊಳ್ಳುವೆನು." (2)

"ಹೌದು ಇಸ್ಮಾಯೇಲನು ದೇವರಿಂದ ಆಶೀರ್ವದಿಸಲ್ಪಟ್ಟು ಅರಬ್ಬರಿಗೆ ತಂದೆಯಾದನು. ಆದರೆ ಇಸಾಕನ ಸಂತತಿಯಿಂದ ದೇವರು ಅನೇಕ ಅಪೋಸ್ತಲರನ್ನೂ, ಪ್ರವಾದಿಗಳನ್ನೂ ಕಳುಹಿಸಿಕೊಟ್ಟಿದ್ದಾನೆಂದು ಮುಸಲ್ಮಾನರಾದ ನಮಗೆ ಗೊತ್ತಿದೆ."

ಕಾಸಿಮನು ಮುಂದುವರಿಸುತ್ತಾ "ಇಸಾಕನಿಗೆ ಇಬ್ಬರು, ಏಸಾವ, ಯಾಕೋಬರೆಂಬ ಗಂಡು ಮಕ್ಕಳು ಹುಟ್ಟಿದರು. (ಯ್ಯಾಕುಬ್) ದೇವರು ತನ್ನ ವಾಗ್ದಾನದ ಮೆಸ್ಸೀಯನನ್ನು ಯಾಕೋಬನ ಮೂಲಕ ಕಳುಹಿಸುತ್ತೇವೆಂದು ಅವನ ಕನಸಿನ ಮೂಲಕ ತಿಳಿಸಿದನು. ಅದರಲ್ಲಿ "ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ, ಇಸಾಕನ ದೇವರೂ ಆಗಿರುವ ಯೆಹೋವನು. ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು. ನೀನು ಪೂರ್ವ ಪಶ್ಚಿಮ ದಕ್ಷಿಣೋತ್ತರ ದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು." (3)

ದೇವರು ಯಾಕೋಬನ ಮುಖಾಂತವಾಗಿ ಮಾತಾಡಿದಾಗ ಅಬ್ರಹಾಮನಿಗೆ ಮಾಡಿದ್ದ ಬಹಳವಾದ ಮೂಲ ವಾಗ್ದಾನಗಳನ್ನು ಪುನರುಚ್ಚರಿಸಿರುವುದನ್ನು

ನೋಡುವಾಗ ಆಶ್ಚರ್ಯವಾಗುತ್ತದೆ. ಇದೇ ವಾಗ್ದಾನವು ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ ಮುಂದುವರಿಯುತ್ತಾ ಹೋಗುತ್ತದೆ. ಮತ್ತು ಅಹಮದ್, ಯಾಕೋಬನ ಮಗನ ಮೂಲಕವಾಗಿ ಭೂಮಿಯ ಎಲ್ಲಾ ಜನರಿಗೂ ಆಶೀರ್ವಾದವಾಗುವುದನ್ನು ನೀನು ನೋಡುತ್ತೀ.

"ಹೌದೌದು ಇದರಿಂದ ಸತ್ಯವೇದದಲ್ಲಿ ಮೆಸ್ಸೀಯನ ಕುರಿತ ಮುಖ್ಯ ಗುರಿಯು ಮತ್ತೆ ಮತ್ತೆ ಪ್ರಕಟವಾಗುತ್ತದೆನ್ನುವುದನ್ನು ಕಾಣಬಹುದು". ಅಹಮದನು ನಗೆಮೊಗದೊಡನೆ ಹೇಳುತ್ತಾನೆ,

"ಅದು ಸರಿಯಾದದ್ದೇ". ಕಾಸಿಮ್ ಮುಂದುವರಿಸುತ್ತಾ "ಇಸ್ರಾಯೇಲನ ಮಕ್ಕಳು (ಬಾನಿ ಇಸ್ರೇಳ್) ಅನೇಕ ಕುಟುಂಬದವರಾಗಿದ್ದು ಮೆಸ್ಸೀಯನು ಹುಟ್ಟುವ ಕುಟುಂಬವನ್ನೂ ಮುಂತಿಳಿಸುತ್ತಾನೆ. ತಾನು ಆರಿಸಿಕೊಂಡ ದಾವೀದನೊಟ್ಟಿಗೂ (ಸಯಿದ್ನ ದಾವೂದ್) ದೇವರು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆ. ದೇವರ ಅನೇಕ ಪ್ರವಾದನೆಗಳಲ್ಲೂ ಪ್ರವಾದಿಯಾದ ದಾವೀದನ ಕುಟುಂಬದಿಂದ ಮೆಸ್ಸೀಯನು ಬರುತ್ತಾನೆಂದು ದೇವರು ತೋರಿಸಿದ್ದಾನೆ. ದಾವೀದನ ತರುವಾಯ ಸುಮಾರು 200 ವರ್ಷಗಳ ನಂತರ ಜೀವಿಸಿದ ಯೆಶಾಯನೆಂಬ ಪ್ರವಾದಿಯಿಂದಲೂ ಸಹ ಇಷಯನ ಕುಟುಂಬದಿಂದ ಮರದಿಂದ ಒಡೆಯುವ ಚಿಗುರಿನ ಹಾಗೆ ಮೆಸ್ಸೀಯನು ಬರುತ್ತಾನೆ ಎಂದು ಹೇಳಿಸಿದ್ದಾನೆ. ದಾವೀದನ ತಂದೆ ಇಷಯನಾಗಿದ್ದನು. ಆ ಕುಟುಂಬದಿಂದ ಬಂದ ಒಬ್ಬನ ಮೇಲೆ ದೇವರ ಆತ್ಮನು ನೆಲಸುತ್ತಾನೆಂದು ಆತನು ಭೂಲೋಕದಲ್ಲಿ ಬಡವರಿಗೆ ನ್ಯಾಯವನ್ನು ತರುವವನಾಗಿ ಆತನು ಪರದೈಸಿನಂತಹ ರಾಜ್ಯವನ್ನು ಮಾಡುತ್ತಾನೆಂದೂ, ಇದರಿಂದ ಆ ರಾಜ್ಯದವರೆಲ್ಲರೂ ಕರ್ತನನ್ನು ತಿಳುಕೊಳ್ಳುತ್ತಾರೆಂದೂ ಸೂಚಿಸಿದನು.

*"ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು. ಅದರ ಬೇರಿನಿಂದ ಹೊರಟ ತಳಿರು ಫಲಿಸುವದು. ಆ ಅಂಕುರದ ಮೇಲೆ ಜ್ಞಾನ ವಿವೇಕದಾಯಕ ಆತ್ಮ, ಆಲೋಚನಾ ಪರಾಕ್ರಮಗಳನ್ನು ಹುಟ್ಟಿಸುವ*

*ಆತ್ಮ, ತಿಳುವಳಿಕೆಯನ್ನು ಯೆಹೋವನ ಭಯವನ್ನೂ ಉಂಟು ಮಾಡುವ ಆತ್ಮ ಅಂತೂ ಯೆಹೋವನ ಆತ್ಮವೇ ನೆಲೆಗೊಂಡಿರುವುದು."* (4) *ಬಡವರಿಗೋಸ್ಕರ ನ್ಯಾಯವಾಗಿ ತೀರ್ಪು ಮಾಡುವನು. ಲೋಕದ ದೀನರಿಗೋಸ್ಕರ ಧರ್ಮವಾಗಿ ನಿರ್ಣಯಿಸುವನು... ಆ ದಿನದಲ್ಲಿ ಜನಾಂಗಗಳು ತಮಗೆ ಧ್ವಜಪ್ರಾಯನಾಗಿ ನಿಂತಿರುವ ಇಷಯನ ಅಂಕುರದವನನ್ನು ಆಶ್ರಯಿಸುವರು. ಅವನ ವಿಶ್ರಮ ಸ್ಥಾನವು ವೈಭವವುಳ್ಳದ್ದಾಗಿರುವದು.* (4)

"ನಾನು ತಿಳುಕೊಂಡಿರುವದು ಸರಿಯೋ ಏನೋ ನೋಡುವ"

ಅಹಮದನು ಪ್ರಾರಂಭಿಸಿ "ದೇವರು ಮೆಸ್ಸೀಯನನ್ನು ಅಬ್ರಹಾಮನ ಮಗ ಇಸಾಕನ ಮಗ, ಯಾಕೋಬನ ಮಗ ಎಂಬುದನ್ನು ವಿಷಧ ಪಡಿಸಿದ್ದಾನೆ ಅಲ್ಲವೇ?"

ಕಾಸಿಮ್ ದೊಡ್ಡದಾಗಿ ನಗುತ್ತಾ "ಬಹಳ ಸರಿಯಾಗಿದೆ. ಸುವಾರ್ತೆಯಲ್ಲಿ ನಾವು ಓದುವಾಗ ಮೆಸ್ಸೀಯನು ಪ್ರವಾದನೆಯಲ್ಲಿ ಸೂಚಿಸಿದಂತೆ ಹುಟ್ಟಿದ್ದಾನೆ. ಅದಕ್ಕಾಗಿಯೇ ಸುವಾರ್ತೆ ಆರಂಭದಲ್ಲಿ ವಂಶಾವಳಿಗಳ ಪಟ್ಟಿ ಕೊಡಲ್ಪಟ್ಟಿದೆ. ಮೆಸ್ಸೀಯನು ಅಬ್ರಹಾಮ್ ಮತ್ತು ದಾವೀದನ ಸಂತತಿ ಎಂಬುದನ್ನು ಇದು ನಿರೂಪಿಸುತ್ತದೆ".

"ಮರಿಯಳ ಮಗನಾದ ಯೇಸುವೇ ಬೈಬಲ್‌ನ ಮುಖ್ಯ ತಿರುಳು ಎಂಬುದು ಸಾಬೀತಾಗಿದೆಯಲ್ಲವೇ? ಆದರೆ ಕಾಸಿಮ್ ನನ್ನಲ್ಲಿ ಇನ್ನೂ ಅನೇಕ ಪ್ರಶ್ನೆಗಳಿವೆ. ಅದನ್ನು ನಮ್ಮ ಮುಂದಿನ ಭೇಟಿಯಲ್ಲಿ ಮುಂದುವರಿಸೋಣ.

"ಅಲ್-ಸಲಾಮೋ-ಅಲಿಕುಂ

ಅಲಿಕುಂ ಅಲ್ ಸಲಾಮ್"

(1) ಆದಿಕಾಂಡ 12:1-3

(2) ಆದಿಕಾಂಡ 17:19-21

(3) ಆದಿಕಾಂಡ 28:13-14

(4) ಯೆಶಾಯ 11:1, 2, 4, 10

# ದೇವರು ಒಬ್ಬನೇ

ಮೂರು ಬೆರಳುಗಳನ್ನು ತೆರೆದು ಆಡಿಸುತ್ತಾ "ನೀನೇನನ್ನು ನೋಡುತ್ತೀ" ಎಂದು ಅಹಮದನು ಕಾಸಿಮನನ್ನು ಕೇಳುತ್ತಾನೆ.

"ಒಂದು ಕೈನ ಮೂರು ಬೆರಳುಗಳನ್ನು ನೋಡುತ್ತೇನೆ" ಎಂದು ಕಾಸಿಮನು ಆಲೋಚನೆ ಅರ್ಥಮಾಡಿಕೊಂಡವನಂತೆ ಉತ್ತರಿಸುತ್ತಾನೆ.

"ಕಾಸಿಮ್, ದೇವರು ಒಬ್ಬನೋ ಮೂರು ಮಂದಿಯೋ? ನೀನು ಹೇಗೆ ನಂಬುತ್ತೀ?"

"ನಾನು ಯಾವ ರೀತಿ ನನ್ನ ನಂಬಿಕೆಯನ್ನು ಇರಿಸಿಕೊಂಡಿದ್ದೇನೆಂದು ಪೂರ್ತಿಯಾಗಿ ನೀನು ಅರ್ಥಮಾಡಿಕೊಂಡಿಲ್ಲವೆಂದು ನೆನಸುತ್ತೇನೆ. ಆದರೆ ನಾನು ಒಬ್ಬನೇ ಸತ್ಯ ದೇವರನ್ನು ನಂಬುತ್ತೇನೆಂಬುದನ್ನು ನೀನು ತಿಳಿಯಬೇಕಿದೆ. ಆತನೇ ಭೂಮ್ಯಾಕಾಶಗಳನ್ನು ನಿರ್ಮಿಸಿದಾತನು. ಆತನು ಎಲ್ಲವನ್ನೂ ಮಾಡಲು ಶಕ್ತನು. ಎಲ್ಲವನ್ನೂ ಬಲ್ಲಾತನು. ಎಲ್ಲಾ ಕಡೆ ಇರುವಾತನು. ನನ್ನ ನಂಬಿಕೆ ಸತ್ಯವೇದದ ಮೇಲೆ ಆಧಾರಗೊಂಡಿದೆ ಮತ್ತು ಈ ಸತ್ಯವೇದ (ಬೈಬಲ್) ದೇವರು ಒಬ್ಬನೇ ಎಂದು ಬೋಧಿಸುತ್ತದೆ. ಸತ್ಯವೇದದ ಅನೇಕ ಕಡೆ ಈ ಸತ್ಯತೆಯು ಬರೆಯಲ್ಪಟ್ಟಿದೆ."

"ಆದರೆ ದೇವರು ಮೂವರಾಗಿ ಒಂದೇ ಸಮಯದಲ್ಲಿರಲು ಸಾಧ್ಯವಿಲ್ಲವಲ್ಲಾ" ಎಂದು ಹೇಳುತ್ತಾ ಮೂರು ಬೆರಳುಗಳನ್ನು ಎತ್ತಿ ಹಿಡಿದು "ಒಂದು ಮತ್ತು ಒಂದು - ಎರಡು. ಎರಡು ಮತ್ತು ಒಂದು - ಮೂರಾಗುತ್ತದಲ್ಲಾ".

"ನೀನೆಷ್ಟು ಅಹಮದ್‌ಗಳಾಗಿದ್ದೀ. ಒಂದೋ? ಎರಡೋ?"

"ಖಂಡಿತವಾಗಿಯೂ ಒಂದೇ".

"ದೇವರು ನಿನ್ನನ್ನು ಪ್ರಾಣ, ಶರೀರ ಎಂದು ಉಂಟು ಮಾಡಿದನು. ನಿನ್ನ ಶರೀರ ಅಹಮದ್‌ದೋ?"

"ಹೌದು"

"ಆದರೆ ನಿನ್ನ ಆತ್ಮ ಯಾವುದು? ಅದೂ ಕೂಡ ಅಹಮದ್‌ನದೊ" "ಹೌದಲ್ಲವೇ? ನಿಜವಾಗಿ ಹೌದು" ಅಹಮದ್‌ಗೆ ಈಗ ಸ್ವಲ್ಪ ಸ್ವಲ್ಪವಾಗಿ ಅರ್ಥವಾಗುತ್ತಾ ಹೋಯಿತು.

ಕಾಸಿಮ್ ಮುಂದುವರಿಸುತ್ತಾ "ನಮ್ಮನ್ನು ಎರಡರಲ್ಲಿ ಒಂದಾಗಿ ಉಂಟುಮಾಡಿದ ದೇವರಿಗೆ ಮೂರರಲ್ಲಿ ಒಂದಾಗಲು ಸಾಧ್ಯವಿಲ್ಲವೆಂದು ನೆನಸುತ್ತೀಯಾ?" ಸ್ವಲ್ಪ ಸಮಯ ಯೋಚಿಸಲು ಬಿಟ್ಟು ಕಾಸಿಮ್ ಮುಂದುವರಿಸುತ್ತಾನೆ.

"ಮೂರು ವ್ಯಕ್ತಿಗಳಾಗಿ ಪ್ರಕಟಿಸಿಕೊಳ್ಳುವ ಸಂಕೀರ್ಣ ವಿಲೀನವಾಗಿ ದೇವರಿದ್ದಾನೆ. ಒಂದು ಸಾರಿ ಒಂದು ಸಾರಿ, ಒಂದು ಇದರ ಅರ್ಥ ಇದೇ"

"ಒಂದೇ" ಅಹಮದನು ತನಗೆ ತಾನೇ ಹೇಳುತ್ತಾ "ಆದರೆ ಮರಿಯಳ ಮಗನಾದ ಯೇಸುವು ದೇವರ ಮಗನಾಗಲಿಕ್ಕಿಲ್ಲ. ಮೆಸ್ಸೀಯನು ದೇವರ ಮಗನೆಂದು ನೀನು ನಂಬಿಕೊಂಡಿದ್ದೀಯಾ ಕಾಸಿಮ್?"

"ನಾನು ಏನು ನಂಬಿದ್ದೇನೆಂದು ನೀನು ನೆನಸುತ್ತೀ?"

"ನನಗೆ ಸರಿಯಾಗಿ ಗೊತ್ತಿಲ್ಲ. ನೀನು ಒಂದು ವೇಳೆ ದೇವರಿಗೆ ಕನ್ಯಾ ಮರಿಯಳ ಜತೆ ದೈಹಿಕ ಸಂಪರ್ಕವಿದ್ದು ಅವರಿಬ್ಬರಿಂದ ಒಬ್ಬ ಮಗನು ಹುಟ್ಟಿದನೆಂದು ನೀನು ನಂಬಿರಬಹುದು."

ಇದೊಂದು ಜೀವಶಾಸ್ತ್ರಕ್ಕೆ ಸಂಬಂಧಿಸಿದ ಹುಟ್ಟುವಿಕೆ ಅಲ್ಲ. ಇದು ಆತ್ಮೀಕ ಸಂಬಂಧವಾಗಿದೆ.

"ದೇವರಲ್ಲಿ ಕ್ಷಮೆ ಕೇಳುತ್ತೇನೆ" (ಅಸ್ಥಗಫರ್ ಅಲ್ಲಾಹ್) ಕಾಸೀಮನು ಸ್ವರವನ್ನು ಸ್ವಲ್ಪ ಸ್ವಲ್ಪವಾಗಿ ಏರಿಸಿ

"ನಾನು ನಂಬಿರುವುದು ಹಾಗಲ್ಲ ಮತ್ತು ಮೆಸ್ಸೀಯನ ಹಿಂಬಾಲಕರಾರೂ ಈ ವಿಧವಾಗಿ ನಂಬಿಲ್ಲ"

"ಹಾಗಾದರೆ ನೀನು ಹೇಗೆ ನಂಬಿದ್ದೀ"

"ದೇವರು ನಿತ್ಯನೆಂದೂ, ಯಾವುದೂ ಸೃಷ್ಟಿಯಾಗದೆ ಇರುವುದಕ್ಕಿಂತ ಮುಂಚಿನಿಂದಲೂ ದೇವರಿದ್ದಾನೆಂದು ನಾನು ನಂಬಿದ್ದೇನೆ. ಸುವಾರ್ತೆಯು

ಮೆಸ್ಸೀಯನು ಯಾರೆಂದು ವಿವರಿಸುವಾಗ, ಮೆಸ್ಸೀಯನು ಈ ಲೋಕದಲ್ಲಿ ಹುಟ್ಟಿದಂದಿನಿಂದಲ್ಲ. ನಿತ್ಯತ್ವದಿಂದ ದೇವರು ಈ ಲೋಕವನ್ನು ಸೃಷ್ಟಿಸುವ ಮುಂಚಿನಿಂದ ಮೆಸ್ಸೀಯನ ಕುರಿತು ಬರೆಯಲ್ಪಟ್ಟಿದೆ."

*"ಆದಿಯಲ್ಲಿ ವಾಕ್ಯವಿತ್ತು. ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವನು ಆದಿಯಲ್ಲಿ ದೇವರ ಬಳಿ ಇದ್ದನು. ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು. ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ. ಆತನಲ್ಲಿ ಜೀವವಿತ್ತು..."* (2)

"ದೇವರು ಈ ಲೋಕವನ್ನು ತನ್ನ ವಾಕ್ಯದಿಂದ ಉಂಟು ಮಾಡಿದನಲ್ಲವೇ"

"ಹೌದು. ಅದು ಸತ್ಯ"

"ಉಂಟಾಗು - ಅದು ಉಂಟಾಯಿತು" (ಕೋನ್ ಫಾ ಯಾಕೋನ್) ಎಂದು ಅಹಮದನು ನೆನಸಿಕೊಂಡನು.

"ಹಾಗಾದರೆ ದೇವರು ಲೋಕವನ್ನು ತನ್ನ ವಾಕ್ಯದಿಂದ ಉಂಟು ಮಾಡಿದನು. ದೇವರಿಂದ ಹೊರಟ ವಾಕ್ಯವು ದೇವರ ಭಾಗವಾಗಿ, ದೇವರ ಸೃಷ್ಟಿಶಕ್ತಿಯಲ್ಲಿ, ಆತನ ಸಕಲ ಗುಣಧರ್ಮಗಳಿಂದ ಕೂಡಿತ್ತು. ದೇವರ ವಾಕ್ಯದಲ್ಲಿ ಜೀವವಿತ್ತು. ಆ ವಾಕ್ಯವಿದ್ದ ಕಡೆಯಲ್ಲಿ ಜೀವವು ಬೇರೆ ಬೇರೆ ರೂಪದಲ್ಲಿ ಸೃಷ್ಟಿ ಆದವು".

"ಹೌದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ವಾಕ್ಯವು ದೇವರಾಗಿತ್ತು ಎಂಬುದರ ನಿಜವಾದ ಅರ್ಥವೇನು" ಇದು ಅಹಮದನ ಪ್ರಶ್ನೆ.

"ಒಂದು ವೇಳೆ ನಾನು ಕಾನೂನಿನ ನ್ಯಾಯಾಲಯದಲ್ಲಿ ನಿಂತುಕೊಳ್ಳಬೇಕಾದ ಸಂದರ್ಭದಲ್ಲಿ ನಾನು ನನ್ನನ್ನೂ, ನನ್ನ ಮಾತುಗಳನ್ನೂ ಬೇರೆ ಬೇರೆಯಾಗಿ ಮಾಡಿಕೊಳ್ಳಲಾಗುವುದಿಲ್ಲ. ನನ್ನ ಮಾತುಗಳು ನನ್ನನ್ನು ಪ್ರತಿನಿಧಿಸುತ್ತವೆ. ಮತ್ತು ಅವು ನನ್ನ ಭಾಗವೇ ಆಗಿವೆ. ನಾನು ಇಲ್ಲಿ ಕುಳಿತು ಮಾತನಾಡಿದರೆ ನಮ್ಮ ಮಾತುಗಳು ನಮ್ಮದೇ ಭಾಗವಾಗಿ ನಾವು ನಮ್ಮ ಮಾತುಗಳಿಂದ ಪ್ರತಿನಿಧಿಸುತ್ತೇವೆ. ದೇವರು ಈ ವಿಶ್ವವನ್ನು ಸೃಷ್ಟಿಸಿದಾಗ ಆತನ ಮಾತುಗಳು ಆತನೊಂದಿಗಿದ್ದವು. ನಾವು ದೇವರನ್ನೂ ಆತನ ಮಾತುಗಳನ್ನೂ ಬೇರೆ ಬೇರೆ

ಮಾಡಲು ಸಾಧ್ಯವಿಲ್ಲ. ಈ ನಿತ್ಯತ್ವದ ಮಾತುಗಳು ದೇವರೊಡನೆ ಒಂದಾಗಿದ್ದು ಮತ್ತು ದೇವರ ಗುಣಲಕ್ಷಣಗಳಿಂದ ಕೂಡಿದ್ದವು. ಅವುಗಳಿಂದ ಮರಿಯಳ ಮಗನಾದ ಯೇಸುವಿನಲ್ಲಿ ಪ್ರತ್ಯಕ್ಷತೆಗೆ ಬಂದು ಅವುಗಳ ಕುರಿತು ಹೀಗೆ ಬರೆಯಲ್ಪಟ್ಟಿದೆ."

*"ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನಾಗಿದ್ದನು."* **(2)**

ತನ್ನ ಕುರಿತು ಹೇಳಿದ ದೇವರ ಒಂದೊಂದು ಮಾತೂ ತನ್ನ ಗುಣಲಕ್ಷಣಗಳೂ ಮೆಸ್ಸೀಯನಲ್ಲಿ ತೋರಿಬಂದವು. ದೇವರು ಪರಿಶುದ್ಧನು. ಮೆಸ್ಸೀಯನು ಎಷ್ಟು ಪರಿಶುದ್ಧನಾಗಿದ್ದನು ಎಂದು ಜನರು ನೋಡಿದಾಗ ದೇವರ ಪರಿಶುದ್ಧತೆಯನ್ನು ಅವನಲ್ಲಿ ಕಂಡರು. ದೇವರು ಪ್ರೀತಿಯುಳ್ಳವನು. ಮೆಸ್ಸೀಯನು ಜನರನ್ನು ಎಷ್ಟು ಪ್ರೀತಿಸಿದನೆಂದರೆ ದೇವರ ಪ್ರೀತಿಯನ್ನು ಜನರು ಆತನಲ್ಲಿ ಕಂಡರು. ದೇವರು ಎಲ್ಲವನ್ನೂ ಮಾಡಬಲ್ಲನು. ಆತನು ಸರ್ವಶಕ್ತನು. ಮೆಸ್ಸೀಯನು ನೀರಿನ ಮೇಲೆ ನಡೆದದ್ದನ್ನೂ, ಬಿರುಗಾಳಿಗೆ ಅಪ್ಪಣೆಕೊಟ್ಟು, ಗಾಳಿಯನ್ನೂ, ಸಮುದ್ರವನ್ನೂ, ಅಬ್ಬರದ ಅಲೆಗಳನ್ನೂ ಶಾಂತಗೊಳಿಸಿದ್ದನ್ನೂ, ರೊಟ್ಟಿಯನ್ನು ಉಂಟು ಮಾಡಿ, ಕುರುಡರನ್ನು ಸ್ವಸ್ಥ ಪಡಿಸಿದ್ದನ್ನೂ, ಸತ್ತವರನ್ನು ಎಬ್ಬಿಸಿದ್ದನ್ನೂ ನೋಡಿದ ಜನರು ದೇವರ ಶಕ್ತಿಯನ್ನೂ, ಮಹಿಮೆಯನ್ನೂ ಕಂಡರು.

"ಸರ್ವವ್ಯಾಪಿಯಾದ ದೇವರು ಹೇಗೆ ಮನುಷ್ಯನಲ್ಲಿ ತನ್ನನ್ನು ನಿಯಮಿತ ಗೊಳಿಸಿಕೊಳ್ಳಲು ಸಾಧ್ಯವಾಯಿತು. ದೇವರು ಮೆಸ್ಸೀಯನಲ್ಲಿದ್ದಾಗ ವಿಶ್ವವನ್ನು ಮರೆತುಬಿಟ್ಟಿದ್ದನೇ?"

"ಅಹಮದ್! ನಾವು ಒಂದು ವೇಳೆ ತೀರವಿಲ್ಲದ ಮಹಾಸಾಗರದಲ್ಲಿ ಪ್ರಯಾಣ ಮಾಡುತ್ತಾ ಇದ್ದೇವೆಂದು ನೆನಸುವ. ಒಂದು ಲೋಟವನ್ನು ನೀರಿನಲ್ಲಿ ಮುಳುಗಿಸಿದರೆ ಅದು ಸಾಗರದಲ್ಲಿರುವ ನೀರಿನಂತೆಯೇ ಇರುತ್ತದಲ್ಲವೇ?

ಇದೇ ರೀತಿಯಾಗಿ ಮೆಸ್ಸೀಯನೂ ಸಹ. ನಿತ್ಯನಾದ ಸರ್ವಶಕ್ತನಾದ ದೇವರು ಎಲ್ಲಾ ಕಡೆ ಇದ್ದಾನೆ. ಅದೇ ಸಮಯದಲ್ಲಿ ಮೆಸ್ಸೀಯನಲ್ಲೂ ಕಾಣಿಸಿಕೊಂಡಿದ್ದಾನೆ. ಅದೇ ಗುಣಲಕ್ಷಣದಲ್ಲೂ, ಅದೇ ಶಕ್ತಿಯಲ್ಲಿಯೂ ಆತನು ಗೋಚರಿಸುತ್ತಾನೆ. ದೇವರು ನಿಯಮಿತಕ್ಕೊಳಪಟ್ಟವನಲ್ಲ. ಆತನು ಮೆಸ್ಸೀಯನಲ್ಲೂ ಕಾಣಿಸಿಕೊಂಡನು. ಆತನು ಅಪರಿಮಿತನು."

"ಆದರೂ ದೇವರು ಮನುಷ್ಯನಲ್ಲಿ ತನ್ನನ್ನು ಪ್ರಕಟಗೊಳಿಸಿಕೊಳ್ಳುವುದಿಲ್ಲ" ಇದು ಅಹಮದನ ಸಂದೇಹ.

"ಹೌದು ದೇವರನ್ನು ನಾವು ಮಿತಿಯಲ್ಲಿಡಬಹುದೋ? ನಾವು ಸರ್ವಶಕ್ತನು ಮಾಡುವ ಕಾರ್ಯಗಳನ್ನು ಮಾಡಲು ಶಕ್ತನಲ್ಲವೆಂದು ಹೇಳಲು ಸಾಧ್ಯವೋ? ಎಲ್ಲವನ್ನೂ ಮಾಡಲು ಆತನಿಗೆ ಶಕ್ತಿ ಇದೆ."

"ಹೌದು! ಆತನಿಗೆ ಎಲ್ಲವನ್ನೂ ಮಾಡಲು ಶಕ್ತಿ ಉಂಟು. ಆದರೆ ಆತನು ಮನುಷ್ಯ ಮಾತ್ರದವನಲ್ಲಿ ತನ್ನನ್ನು ಪ್ರಕಟ ಮಾಡಿಕೊಂಡ ಎನ್ನುವದರಲ್ಲಿ ನನಗೆ ನಂಬಿಕೆ ಬರುತ್ತಾ ಇಲ್ಲ" ಎಂದನು ಅಹಮದ್ ದೀರ್ಘವಾದ ಉಸಿರನ್ನೆಳೆದು ಕೊಂಡು.

"ಇಲ್ಲಿ ನೋಡು ಒಂದು ವೇಳೆ ಇದೊಂದು ಸಮಸ್ಯೆಯೆಂದು ನಾವು ತಿಳಿಯಬಹುದು. ಆದರೆ ದೇವರಿಗಲ್ಲ. ಆತನು ತಾನು ಬಯಸುವ ಯಾವುದನ್ನೂ ಮಾಡಲು ಶಕ್ತನು. ಒಂದು ವೇಳೆ ನೀನಾಗಲೇ ತಿಳಿದಿರುವ ಒಂದು ಕತೆ ನೋಡು. ದೇವರು ಉರಿಯುವ ಬೆಂಕಿಯಲ್ಲಿ ಪೊದೆಯೊಳಗೆ ಕಾಣಿಸಿಕೊಂಡನೆಂದರೆ ನೀನು ಏನು ಹೇಳುತ್ತೀ? ಅದರಿಂದ ಮೋಶೆಯ ಸಂಗಡ ದೇವರು ಮಾತನಾಡಿದನು ಎಂದು ಯಾರಾದರೂ ಹೇಳಿದರೆ ನಿನ್ನ ಪ್ರತಿಕ್ರಿಯೆ ಏನು?"

ಅಹಮದನು ಸ್ವಲ್ಪ ಸಮಯ ಸುಮ್ಮನಿದ್ದು, ತನ್ನೊಳಗೆ ತಾನೇ ನಸು ನಕ್ಕು, 'ಹೌದೌದು! ಉರಿಯುವ ಪೊದೆಯೊಳಗಿಂದ ತನ್ನನ್ನು ಪ್ರಕಟಿಸಿಕೊಂಡ ದೇವರಿಗೆ ಮಾನವನೊಳಗಿಂದ ತನ್ನನ್ನು ಪ್ರಕಟಿಸಿಕೊಳ್ಳುವುದು ಕಷ್ಟವಲ್ಲ"ವೆಂದು ಕೊಂಡನು.

ಕಾಸಿಮ್ ಮುಂದುವರಿಸಿ "ಅಹಮದ್ ನಿಜವಾಗಿ ದೇವರ ಆತ್ಮವೆಂಬುದಾಗಿ (ಕಲಿಮತ್-ಅಲ್ಲಾಹ್-ವರೋಹ್ ಅಲ್ಲಾಹ್) ಯಾರನ್ನು ಕುರಿತು ಹೇಳಿದರು? ದೇವರ ಆತ್ಮನೂ ದೇವರೊಡನೆ ಒಂದಾಗಿದ್ದನು. ದೇವರಾತ್ಮನು ಕನ್ಯಾಮರಿಯಳನ್ನು ಆವರಿಸಿದಾಗ ಆಕೆ ಗರ್ಭಿಣಿ ಆಗಿ ಮೆಸ್ಸೀಯನಿಗೆ ಜನ್ಮ ನೀಡಿದಳು. ಇದು ದೇವದೂತ ಗಾಬ್ರಿಯೇಲನಿಂದ ಮೊದಲೇ ಹೇಳಲ್ಪಟ್ಟಿತು.

*"ನಿನ್ನ ಮೇಲೆ ಪವಿತ್ರಾತ್ಮ ಬರುವುದು. ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು. ಆದುದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವನು."* (3)

"ಈ ರೀತಿಯಾಗಿ ಈ ಲೋಕಕ್ಕೆ ಬಂದವನಾರೆಂಬುದೇ ಈಗ ಬಂದಿರುವ ಪ್ರಶ್ನೆ. ಒಂದು ವೇಳೆ ಮೆಸ್ಸೀಯನ ಕಾಲದಲ್ಲಿ ನೀನು ಒಬ್ಬ ವೈದ್ಯನಾಗಿದ್ದು ಒಂದು ಜನನ ದಾಖಲೆಯನ್ನು ಬರೆಯಬೇಕಾದ ಸಂದರ್ಭ ಬಂದಿತೆಂದಿಟ್ಟುಕೋ. ಏನೆಂದು ಬರೆಯುತ್ತೀ. ಆತನ ಹೆಸರೇನು?"

ಒಂದು ವೇಳೆ ನಾನು ಹೀಗೆ ಬರೆದಿರುತ್ತಿದ್ದೆ. "ಯೇಸು-ಮರಿಯಳ ಪುತ್ರ" ಎಂದು.

"ತಾಯಿಯ ಹೆಸರು"

"ಕನ್ನಿಕೆಯಾದ ಮರಿಯಳು"

"ಅದು ಸರಿ. ತಂದೆಯ ಹೆಸರು ಎಂಬ ಸ್ಥಳದಲ್ಲಿ?"

"ಆತನಿಗೆ ತಂದೆ ಇರಲಿಲ್ಲ"

"ಹೌದು. ಒಂದು ವೇಳೆ ಆ ಸ್ಥಳವನ್ನು ಹಾಗೆಯೇ ಕಾಲಿ ಬಿಟ್ಟಿರುತ್ತಿದ್ದೆ. ಯಾಕೆಂದರೆ, ಯೇಸುವಿಗೆ ಇಹಲೋಕದ ತಂದೆ ಇರಲಿಲ್ಲ. ಅಥವಾ ನಮಗೆ ನಾವೇ ಪ್ರಶ್ನಿಸಿಕೊಂಡಿರುತ್ತಿದ್ದೇವೇನೋ".

"ಹಾಗಾದರೆ ಈತನು ಎಲ್ಲಿಂದ ಬಂದನು? ಹಾಗಾದರೆ ದೇವರ ವಾಕ್ಯ ಮತ್ತು ದೇವರ ಆತ್ಮ ಎಂದು ಕರೆಯಲ್ಪಡುವವನ ಮೂಲ ಸ್ಥಾನ ಯಾವುದು?" ಪರಲೋಕದಿಂದ ಈ ಲೋಕಕ್ಕೆ ಇಳಿದು ಬಂದವನ ಗುರುತನ್ನು ಹೇಗೆ ತಿಳಿಯುವುದು?"

ಆತನೇ ಅದಕ್ಕೆ ಉತ್ತರ ಹೇಳಿದ್ದನ್ನೂ ನೋಡು.

*"ದೇವರು ಕೊಡುವ ಆ ರೊಟ್ಟಿ ಯಾವುದೆಂದರೆ ಪರಲೋಕದಿಂದ ಇಳಿದು ಬಂದು ಲೋಕಕ್ಕೆ ಜೀವವನ್ನು ಉಂಟು ಮಾಡುವಂಥದ್ದೇ. ಜೀವ ಕೊಡುವ ರೊಟ್ಟಿ ನಾನೇ. ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವಾಗುವುದಿಲ್ಲ. ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ."* (4) *"ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿ ನಾನೇ. ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ನಾನು ಕೊಡುವ ರೊಟ್ಟಿ ನನ್ನ ಮಾಂಸವೇ. ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು."* (5)

"ಅಹಮದ್, ಆತನು ತನ್ನ ಮಾಂಸವನ್ನು ಮಾನವರಿಗಾಗಿ ಬಲಿಯಜ್ಞವಾಗಿ ಕೊಡಲು ಬಂದನು. ಒಬ್ಬನು ಸಾಮಾನ್ಯವಾದ ರೊಟ್ಟಿ ತಿಂದರೆ ಶಾರೀರಿಕವಾದ ಜೀವ ಪಡೆಯುತ್ತಾನೆ. ಆದರೆ ಪರಲೋಕದಿಂದ ಇಳಿದು ಬಂದ ದೇವರ ರೊಟ್ಟಿಯನ್ನು ತಿಂದವನು ಆತ್ಮೀಯ ಜೀವವನ್ನು ಪಡೆಯುತ್ತಾನೆ. ಅಂದರೆ ನಿತ್ಯಜೀವ. ಯಾರು ಮೆಸ್ಸೀಯನನ್ನು ನಂಬುತ್ತಾರೋ, ಆತನೊಂದಿಗೆ ಪಾಲು ತೆಗೆದು ಕೊಳ್ಳುತ್ತಾರೋ ಅವರು ಜೀವವನ್ನು ಹೊಂದುತ್ತಾರೆ. ಆ ಜೀವವು ಮಾನವನ ಅಂತರಾಳದ ಹಸಿವನ್ನೂ, ಬಾಯಾರಿಕೆಯನ್ನೂ ನೀಗಿಸಿ, ದೇವರ ಕುರಿತಾದ ಬಯಕೆಯನ್ನು ಹೊಂದಿದವರಾಗುತ್ತಾರೆ. ಇದನ್ನೇ ನಾನು ಅನುಭವವಾಗಿ ಹೊಂದಿರುವುದು. ನಿನಗಾಗಿಯೂ ಸಹ ದೇವರಿಂದ ಬಂದ ಮೆಸ್ಸೀಯನಾಗಿ ಆತನಿದ್ದಾನೆ."

ಅಹಮದ್ ಗಲಿಬಿಲಿಗೊಂಡಂತೆ ಕಾಣಿಸಿದ ಮತ್ತು "ನಾನು ಇನ್ನೂ ಅದಕ್ಕೆ ಸಿದ್ಧನಾಗಿಲ್ಲ. ನನ್ನ ತಲೆಯಲ್ಲಿ ಅನೇಕ ಯೋಚನೆಗಳು ಓಡಾಡುತ್ತವೆ. ಆದರೆ ನೀನು ದೇವರನ್ನು ನಂಬಿರುವ ವಿಧಾನವನ್ನು ನಾನು ಸಂಪೂರ್ಣ ಅಪಾರ್ಥ ಮಾಡಿಕೊಂಡಿದ್ದೆ. ಈಗ ನಾನು ನಿಧಾನವಾಗಿ ನೀನು ಹೇಗೆ ಅರ್ಥ ಮಾಡಿಕೊಂಡಿದ್ದೀ ಎಂದು ತಿಳಿದುಕೊಳ್ಳುತ್ತಾ ಇದ್ದೇನೆ. ಹೌದು.

ನೀನು ಮೆಸ್ಸೀಯನ ಮುಖಾಂತರ ತನ್ನನ್ನು ಪ್ರಕಟಿಸಿಕೊಂಡಂತ ನಿಜ ಏಕದೇವರನ್ನು ನಂಬಿದ್ದೀ. ನಾನು ಮೆಸ್ಸೀಯನನ್ನು ನನ್ನ ಹೃದಯ ಪೂರ್ವಕವಾಗಿ ಪ್ರೀತಿಸುತ್ತಿದ್ದೇನೆ. ಆದರೆ ಇನ್ನೂ ನನಗೆ ಅನೇಕ ಪ್ರಶ್ನೆಗಳು ಕಾಡುತ್ತಿವೆ. ನಾನು ಅವುಗಳಿಗೆ ಸರಿಯಾದ ಉತ್ತರ ಕಂಡುಕೊಳ್ಳಬೇಕು. ಆದರೆ ನಾವು ಅದನ್ನು ಮುಂದಿನ ಭೇಟಿಯಲ್ಲಿ ಚರ್ಚಿಸುವ ಆಗಬಹುದೇ ಕಾಸಿಮ್.

"ಖಂಡಿತವಾಗಿ"

**ಅಲ್-ಸಲಾಮೋ-ಆಲೇಕುಂ**

**ಆಲೇಕುಂ-ಆಲ್-ಸಲಾಮ್**

(1) ಯೋಹಾನ 1:1-4 (2) ಯೋಹಾನ 1:14 (3) ಲೂಕ 1:35 (4) ಯೋಹಾನ 6:33, 35 (5) ಯೋಹಾನ 6:51

# ದೇವರು ಮತ್ತು ಮಾನವ

"ನಮ್ಮ ಹಿಂದಿನ ದಿನದ ಚರ್ಚೆಯ ಕುರಿತು ರಾತ್ರಿ ಹಗಲು ಯೋಚಿಸುತ್ತಾ ಬಂದೆ" ಎಂದು ಮರುದಿನ ಅಹಮದನು ಕಾಸಿಮನನ್ನು ಸಂಧಿಸಿದ ಕೂಡಲೇ ವಿಷಯ ಪ್ರಾರಂಭಿಸಿದ.

"ಮೊದಲನೇದಾಗಿ ನೀನು ಹೇಳಿದ್ದು. ಮರಿಯಳ ಮಗನಾದ ಯೇಸುವು ಒಬ್ಬ ಮಾನವನು ಎಂದು. ನಂತರ ದೇವರು ಆತನ ಮೂಲಕ ತನ್ನನ್ನು ಪ್ರಕಟಿಸಿಕೊಂಡ ಎಂದು ಹೇಳಿದಿ. ಆತನು ನಿಜವಾಗಿ ಯಾರು? ಎಂದು ತಿಳಿಯಬೇಕಾಗಿದೆ. ಆತನು ಮರಿಯಳ ಸಾಮಾನ್ಯ ಮಗನಾಗಿದ್ದು, ಆತನನ್ನು ನೀನು ಮೆಸ್ಸೀಯನು ಎಂಬುದಾಗಿ, ಮುಂದೆ ಆತನೇ ದೇವರ ಮಗನೆಂಬುದಾಗಿಯೂ ಮಾಡಿದ್ದೀ. ಇದು ತಪ್ಪಲ್ಲವೇ?"

ಕಾಸಿಮ್ ಶಾಂತ ಚಿತ್ತನಾಗಿ "ಅಹಮದ್ ಈ ಪ್ರಶ್ನೆಗೆ ಉತ್ತರವು ದೇವರೊಟ್ಟಿಗಿನ ನಿತ್ಯಜೀವದ ವಿಷಯದ ಬೀಗದ ಕೈಯಾಗಿದೆ. ಅದು ಇಲ್ಲೂ, ಈಗಲೂ ಮತ್ತು ನಿತ್ಯತ್ವದಲ್ಲೂ ಅನ್ವಯವಾಗುವಂತದ್ದು." "ನಾವು ಒಬ್ಬ

ಮಾನವನನ್ನು ದೇವರನ್ನಾಗಿ ಮಾಡಿದರೆ ಇದೊಂದು ಶಿರ್ಕ್ (ದೇವರಿಗೆ ಸರಿ ಸಮಾನವಾದ ಸ್ಥಾನ) ದಂತಾಗುವುದಿಲ್ಲವೇ? ಆದರೆ ಸತ್ಯವೇದದಲ್ಲಿ ಬೋಧಿಸುವುದು ಏನಂದರೆ ದೇವರು ಮನುಷ್ಯನ ಮೂಲಕ ಪ್ರಕಟಿಸಿಕೊಳ್ಳುತ್ತಾನೇ ವಿನಃ, ಮನುಷ್ಯನು ದೇವರಲ್ಲಿ ಪ್ರಕಟಗೊಳಿಸಿಕೊಳ್ಳಲು ಸಾಧ್ಯವಿಲ್ಲ. ಮೆಸ್ಸೀಯನು ಮನುಷ್ಯನಾಗಿ ಹುಟ್ಟಿದನೆಂದು ನಾವು ಇಬ್ಬರೂ ಒಪ್ಪಿಕೊಳ್ಳುತ್ತೇವೆ. ಪ್ರವಾದಿಗಳನುಸಾರವಾಗಿ ಆತನು ಅಬ್ರಹಾಮನ ಮಗನು, ದಾವೀದನ ಮಗನು, ಮರಿಯಳ ಮಗನು. ಮೆಸ್ಸೀಯನು ಹುಟ್ಟುವದಕ್ಕೆ ಬಹಳ ಹಿಂದೆ ಆತನು ಮೆಸ್ಸೀಯನಾಗಿ ಬರುತ್ತಾನೆಂದು ಮುಂತಿಳಿಸಲ್ಪಟ್ಟಿತ್ತು."

"ಆದರೆ ಅಪೋಸ್ತಲರೂ, ಪ್ರವಾದಿಗಳೂ ಮೆಸ್ಸೀಯನು ಬರುವದಕ್ಕಿಂತ ಮುಂಚಿತವಾಗಿಯೇ ದೇವರು ಆತನ ಮೂಲಕ ತನ್ನನ್ನು ಪ್ರಕಟ ಮಾಡಿಕೊಳ್ಳುವದರ ಕುರಿತು ಮುಂತಿಳಿಸಿದ್ದನೆನ್ನುತ್ತೀಯಾ?" ಅಹಮದನು ಆಶ್ಚರ್ಯದಿಂದ ಕೇಳಿದನು.

"ಸತ್ಯವೇದ (ಬೈಬಲ್)ದ ಮುಖ್ಯ ಗುರಿ ಮೆಸ್ಸೀಯನೇ ಆಗಿದ್ದಾನೆ. ಆದುದರಿಂದ ಮೆಸ್ಸೀಯನ ಕುರಿತ ಸತ್ಯತೆಯನ್ನು ಪ್ರವಾದಿಗಳ ಮುಖಾಂತರ ಮುಂತಿಳಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ".

"ದಯವಿಟ್ಟು ಅದನ್ನು ತೋರಿಸು. ನಾನು ಅದರ ಕುರಿತು ತಿಳಿಯಲು ಆಸಕ್ತಿಯುಳ್ಳವನಾಗಿದ್ದೇನೆ."

ಕಾಸಿಮ್ ಮಾತನ್ನು ಮುಂದುವರಿಸುವದಕ್ಕಿಂತ ಮುಂಚೆ ಸ್ವಲ್ಪ ಹೊತ್ತು ಮೌನವಾಗಿದ್ದು ನಂತರ "ದೇವರು ಕ್ರಿಸ್ತಪೂರ್ವ **700** ವರ್ಷಗಳ ಮುಂಚೆ ಪ್ರವಾದಿಯಾದ ಮೀಕನಿಂದ ಮೆಸ್ಸೀಯನು ಬೆತ್ಲೆಹೇಮೆಂಬ ಊರಿನಲ್ಲಿ ಹುಟ್ಟುವುದಾಗಿ ತಿಳಿಸಿ, ತಾನು ಹುಟ್ಟುವದಕ್ಕಿಂತ ಮುಂಚಿತವಾಗಿಯೇ ಮೆಸ್ಸೀಯನ ಹುಟ್ಟುವಿಕೆ ಪ್ರಕಟವಾಗಿತ್ತು ಎನ್ನುತ್ತಾನೆ."

*"ಎಫ್ರಾತದ ಬೆತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದಾಗಿದ್ದರೂ ಇಸ್ರಾಯೇಲ್ಯರನ್ನು ಆಳತಕ್ಕವನು. ನಿನ್ನೊಳಗಿಂದ*

*ನನಗಾಗಿ ಹೊರಡುವನು. ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು".* (1)

"ಅದೇ ರೀತಿ ಮೆಸ್ಸೀಯನು ಬೆತ್ಲೆಹೇಮೆಂಬ ಊರಿನಲ್ಲಿ ಹುಟ್ಟಿದನು ಮತ್ತು ಸುವಾರ್ತೆಯಲ್ಲಿ ಬರೆದಂತೆ

*"ಯೋಸೇಫನು ಸಹ ತಾನು ದಾವೀದನ ಮನೆತನದವನೂ, ಗೋತ್ರದವನೂ ಆಗಿದ್ದರಿಂದ ಹೆಸರು ಬರೆಸಿಕೊಳ್ಳುವದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಮರಿಯಳ ಸಂಗಡ ಗಲಿಲಾಯ ಸೀಮೆಯ ನಜರೇತ್ ಎಂಬ ಊರಿನಿಂದ ಹೊರಟು, ಯೂದಾಯದಲ್ಲಿರುವ ಬೆತ್ಲೆಹೇಮ್ ಎಂಬ ದಾವೀದನ ಊರಿಗೆ ಹೋದನು. ಆಗ ಮರಿಯಳು ಪೂರ್ಣ ಗರ್ಭಿಣಿಯಾಗಿದ್ದಳು. ಅವರು ಅಲ್ಲಿದ್ದಾಗ ಆಕೆಗೆ ದಿನ ತುಂಬಿತು. ಆಕೆಯು ತನ್ನ ಚೊಚ್ಚಲು ಮಗುವನ್ನು ಹೆತ್ತು..."* (2)

"ಇಲ್ಲಿ ಬರುವ ಪ್ರಶ್ನೆ ಈ ಲೋಕದಲ್ಲಿ ಹುಟ್ಟುವ ಮೊದಲೇ ಬರಲಿರುವವನ ಕುರಿತು ಮುಂತಿಳಿಸಿರುವ ವ್ಯಕ್ತಿ ಯಾರು? ಎಂಬುದೇ. ಇದರ ಕುರಿತು ಟೀಕಿಸುತ್ತಿದ್ದ ಯೆರುಸಲೇಮಿನ ಯೆಹೂದ್ಯರ ಕೂಡ ಮಾತನಾಡುವಾಗ" (ಆಲ್ ಖುದ್ಸ್)

*"ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು. ಅದನ್ನು ನೋಡಿ ಸಂತೋಷಗೊಂಡೆನು ಅಂದನು. ಅದಕ್ಕೆ ಯೆಹೂದ್ಯರು ನಿನಗೆ ಇನ್ನೂ ಐವತ್ತು ವರ್ಷವಾಗಿಲ್ಲ. ಅಬ್ರಹಾಮನನ್ನು ನೋಡಿದ್ದೀಯಾ? ಅಂದಾಗ ಯೇಸು ನಿಮಗೆ ನಿಜ ನಿಜವಾಗಿ ಹೇಳುತ್ತೇನೆ - ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ ಅಂದನು"* (3)

"ಅಬ್ರಹಾಮನು ಕ್ರಿಸ್ತಪೂರ್ವ **2000** ವರ್ಷಗಳ ಸುಮಾರಿನಲ್ಲಿ ಜೀವಿಸಿದ್ದನು ಎಂದು ನಮಗೆ ಗೊತ್ತಿದೆ".

"ಹಾಗಿದ್ದರೆ ಮೆಸ್ಸೀಯನೇ ತಾನು ಹುಟ್ಟುವದಕ್ಕಿಂತ ಮುಂಚೆ ಇದ್ದವನೆಂದು ಹೇಳುತ್ತಾನಲ್ಲವೇ? ಆದರೆ ದೇವರು ಮೆಸ್ಸೀಯನಲ್ಲಿ ತನ್ನನ್ನು ಪ್ರಕಟಪಡಿಸಿಕೊಳ್ಳುತ್ತೇನೆಂದು ಹೇಳಿದುದರ ಪುರಾವೆ ಏನು?"

"ಅದು ಅನೇಕ ಕಡೆಗಳಲ್ಲಿ ಬರೆಯಲ್ಪಟ್ಟಿದೆ. ಪ್ರವಾದಿಯಾದ ಯೆಶಾಯನು ಮರಿಯಳ ಮಗನಾದ ಯೇಸುವು ಬೆಳೆಯುವ ಒಂದು ಚಿಕ್ಕ ಸ್ಥಳದ ಕುರಿತು ತಿಳಿಸಿದ್ದನು. ಆತನು ನಿತ್ಯರಾಜ್ಯವನ್ನು ಉಂಟು ಮಾಡುತ್ತಾನೆ. ಅಲ್ಲಿ ದೇವಸಮಾಧಾನವು ನೆಲೆಸಿರುತ್ತದೆ. ಆತನು ತಾನೇ ದಾವೀದನ ಮಗನಾಗಿದ್ದು ನಿತ್ಯಕ್ಕೂ ಆಳುವವನು ಎನ್ನುತ್ತಾ ಆ ಪ್ರವಾದಿಯೂ ಮೆಸ್ಸೀಯನ ಗುಣಲಕ್ಷಣಗಳನ್ನು ಬೇರೆ ಬೇರೆ ಹೆಸರುಗಳಿಂದ ವಿವರಿಸುತ್ತಾನೆ."

*"ಒಂದು ಮಗುವು ನಮಗಾಗಿ ಹುಟ್ಟಿದೆಯಷ್ಟೆ. ವರದ ಮಗನು ನಮಗೆ ದೊರೆತನು. ಆಡಳಿತವು ಅವನ ಬಾಹುಗಳ ಮೇಲಿರುವದು. ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವದು. ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು."* (4)

"ದೇವರು ಕೊಟ್ಟ ಹೆಸರುಗಳು ಮತ್ತೊಬ್ಬನ ಗುಣಲಕ್ಷಣಗಳನ್ನು ವಿವರಿಸುವಂತವು ಎಂದು ಬಲ್ಲೆವು. ಹೀಗಿರುವಾಗ ನೀನು ಏನು ಹೇಳುತ್ತೀ ಅಹಮದ್. ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬ ಹೆಸರನ್ನು ಯಾರು ಕೊಟ್ಟವರು?"

"ಮೆಸ್ಸೀಯನ ಈ ಚಿತ್ರವನ್ನು ಪ್ರವಾದಿಗಳು ಆತನು ಹುಟ್ಟಲಿಕ್ಕಂತ ಮುಂಚಿತವಾಗಿ ಚಿತ್ರಿಸಿದ್ದರು. ಆದರೆ ತಾನು ಉಂಟು ಮಾಡಿದ ಲೋಕಕ್ಕೆ ನಿಜವಾಗಿ ದೇವರು ಬರುವ ಅವಶ್ಯಕತೆ ಇತ್ತೇ?" ಅಹಮದನ ಮತ್ತೊಂದು ಪ್ರಶ್ನೆ.

ಸ್ನಾನಿಕನಾದ ಯೋಹಾನನು (ಯಾಹ್ಯಾ ಅಬ್‌ನ್ ಜಕರಿಯಾ) ಮೆಸ್ಸೀಯನ ಸಮಕಾಲೀನನೇ. ಅವನು ದೇವರಿಂದ ಕಳುಹಿಸಲ್ಪಟ್ಟವನಾಗಿ ಮೆಸ್ಸೀಯನಿಗೆ ದಾರಿ ಸಿದ್ಧಪಡಿಸಲು ನೇಮಿಸಿದ್ದನು. ಜನರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಆತನಲ್ಲಿ ನಂಬಿಕೆಗೆ ಬರುವಂತೆ ಇವನು ಕಳುಹಿಸಲ್ಪಟ್ಟನು. ಈ ಯೋಹಾನನನ್ನು ತಾನಾರೆಂದೂ ದೇವರು ಅವನನ್ನು ಯಾಕೆ ಕಳುಹಿಸಿದನೆಂದೂ ಕೇಳಿದಾಗ ಅವನು ಯೆಶಾಯ ಪ್ರವಾದಿಯ ನಾಲ್ವತ್ತನೇ ಅಧ್ಯಾಯದ ವಾಕ್ಯಭಾಗವನ್ನು ಉದಾಹರಿಸಿದ್ದನ್ನು ನೋಡಬಹುದು. ಅದರಲ್ಲಿ "*ಇಗೋ ಒಂದು ವಾಣಿ. ಅರಣ್ಯದಲ್ಲಿ ಯೆಹೋವನ ದಾರಿಯನ್ನು ಸರಿಪಡಿಸಿರಿ. ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ ಮಾಡಿರಿ. ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು. ಮಲೆನಾಡು ಬೈಲುಸೀಮೆಯಾಗುವವು. ಯೆಹೋವನ ಮಹಿಮೆಯು ಗೋಚರವಾಗುವದು. ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು.*" (5)

"ಪ್ರವಾದಿಯಾದ ಯೆಶಾಯನು ಚಿತ್ರಿಸಿದ ಈ ದೃಷ್ಯದಲ್ಲಿ ದೊಡ್ಡ ಅರಸನ ಭೇಟಿಯನ್ನು ಕಾಣುತ್ತೇವೆ. ಜನರು ಹೊಸ ಮತ್ತು ನೇರ ಮಾರ್ಗಗಳನ್ನು ಅಡವಿಯಲ್ಲಿ ಮಾಡುವ ಚಿತ್ರಣ ಇದಾಗಿದೆ. ಆದರೆ ಈ ಭೇಟಿ ನೀಡುವ ಅರಸನಾರೆಂದು ಊಹಿಸುತ್ತೀಯಾ ಅಹಮದ್?"

"ಪ್ರವಾದಿಗಳ ಪ್ರಕಾರ ಅದು ಕರ್ತನೇ, ನಮ್ಮ ದೇವರೇ ಆಗಿದ್ದಾನೆ".

ಆ ಚಿತ್ರ ಇನ್ನೂ ಸ್ಪಷ್ಟವಾಗಿದೆ. ಮುಂದೆ ಅದೇ ಭಾಗದಲ್ಲಿ ಓದುವದಾದರೆ,

"ಶುಭಸಮಾಚಾರವನ್ನು ತಿಳಿಸಬಲ್ಲ ಚೀಯೋನೇ, ಉನ್ನತ ಪರ್ವತವನ್ನು ಹತ್ತಿಕೋ. ಸುವರ್ತಮಾನವನ್ನು ಪ್ರಕಟಿಸಬಲ್ಲ ಯೆರುಸಲೇಮೇ, ನಿನ್ನ ಧ್ವನಿಯನ್ನು ಗಟ್ಟಿಯಾಗಿ ಎತ್ತು. ನಿರ್ಭಯವಾಗಿ ಎತ್ತಿ, ಯೆಹೂದದ ಪಟ್ಟಣಗಳಿಗೆ - ಇಗೋ ನಿಮ್ಮ ದೇವರು. ಆಹಾ! ಕರ್ತನಾದ ಯೆಹೋವನು ಶೂರನಾಗಿ ಬರುವನು. ತನ್ನ ಭುಜಬಲದಿಂದಲೇ ಆಳುವನು. ಇಗೋ ಆತನ ಕ್ರಿಯಾಲಾಭವು ಆತನೊಂದಿಗಿದೆ. ಆತನ ಶ್ರಮದ ಫಲವು ಆತನ ಮುಂದಿದೆ. ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು. ಮರಿಗಳನ್ನು ಕೈಯಿಂದ ಕೂಡಿಸಿ ಎದೆಗೆತ್ತಿ ಕೊಳ್ಳುವನು. ಹಾಲು ಕುಡಿಸುವ ಕುರಿಗಳನ್ನು ಮೆಲ್ಲಗೆ ನಡಿಸುವನು ಎಂದು ಸಾರು." (6)

"ಮೆಸ್ಸೀಯನು ನಿಜವಾಗಿ ಎಲ್ಲಾ ವಿಶ್ವಾಸಿಗಳಿಗೆ ಕುರುಬನಾಗಿದ್ದಾನೆ. ಆತನೇ ಹೇಳಿದ ವಾಕ್ಯ ಗಮನಿಸು."

"ನಾನೇ ಒಳ್ಳೇ ಕುರುಬನು. ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ." (7)

"ಆದರೆ ಇದು ಯಾರು? ಪ್ರವಾದಿಗಳ ಮಾತಿನಂತೆ ಕುರುಬನಂತೆ ಬರುವವನ್ಯಾರು? ಹೇಳು ಅಹಮದ್."

"ಅದು ಕರ್ತನಾದ ದೇವರು ತಾನೇ ಎಂದು ಒಪ್ಪಿಕೊಳ್ಳುತ್ತೇನೆ" ಎಂದು ಮೆಲ್ಲನೆ ಹೇಳುತ್ತಾ, ಆದರೆ ಪ್ರವಾದಿಗಳ ಮಾತನ್ನು ಓದಿದ ನಂತರ ನಡುಗುವ ಸ್ವರದಲ್ಲಿ ಹೇಳುತ್ತಾನೆ.

ಕಾಸಿಮ್ ಮುಂದುವರಿಸುತ್ತಾ "ನೀನು ಅರ್ಥಮಾಡಿಕೊಂಡಂತೆ, ಮೆಸ್ಸೀಯನ ಕುರಿತಾದ ಎಲ್ಲಾ ಪ್ರವಾದನೆಗಳೂ ಮರಿಯಳ ಮಗನಾದ ಯೇಸುವಿನಲ್ಲಿ ನೆರವೇರಲ್ಪಟ್ಟಿದೆ. ಮೆಸ್ಸೀಯನು ಬರುವುದಕ್ಕಿಂತ ಮುಂಚಿತವಾಗಿಯೇ ಸ್ನಾನಿಕನಾದ ಯೋಹಾನನ ಭವಿಷ್ಯದ ತಂದೆಯಾದ ಜಕರೀಯನ ಬಳಿಗೆ

ದೇವದೂತನಾದ ಗಾಬ್ರಿಯೇಲನು ಬಂದನು. ಜಕರೀಯನಿಗೆ ಒಬ್ಬ ಮಗನು ಹುಟ್ಟುವನೆಂದೂ ಅವನ ಮಗನನ್ನು ವಿಶೇಷ ಕಾರ್ಯಕ್ಕಾಗಿ ನೇಮಿಸಲ್ಪಟ್ಟಿದೆಯೆಂದೂ ಹೇಳುತ್ತಾನೆ."

*"ಅವನು ಕರ್ತನ ದೃಷ್ಟಿಯಲ್ಲಿ ಮಹಾ ಪುರುಷನಾಗಿರುವುದು. ಅವರು ಹುಟ್ಟಿದಂದಿನಿಂದಲೂ ಪವಿತ್ರಾತ್ಮಭರಿತನಾಗಿರುವನು. ಇಸ್ರಾಯೇಲ್ಯರಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು. ಅವನು ಆತನ ಮುಂದೆ ಹೋಗಿ ಎಲೀಯನ ಗುಣಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ, ಹಟಹಿಡಿದವರನ್ನು ನೀತಿವಂತರ ಜ್ಞಾನದ ಕಡೆಗೂ ತಿರುಗಿಸಿ, ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು."* **(8)**

"ಸ್ನಾನಿಕನಾದ ಯೋಹಾನನ ಹಿಂದೆ ಹೋಗುವವರಾರು? ಎಂದು ಸುವಾರ್ತೆಯಲ್ಲಿ ತಿಳಿಸಲ್ಪಟ್ಟಿದೆ ಅಹಮದ್?"

"ಅವರ ದೇವರಾದ ಕರ್ತನೇ ಆಗಿದ್ದಾನೆ" ಅಹಮದನು ಸೌಮ್ಯದಿಂದ ಉತ್ತರಿಸುತ್ತಾನೆ.

ಸ್ನಾನಿಕನಾದ ಯೋಹಾನನು ಹುಟ್ಟಿದ ದಿನದಲ್ಲಿ ಜಕರೀಯನು ತನ್ನ ಹೊಸದಾಗಿ ಹುಟ್ಟಿದ ಮಗನ ಕುರಿತು ಪ್ರವಾದನೆ ನುಡಿದನು.

*"ಮಗುವೇ, ನೀನಾದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ. ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧ ಮಾಡುವವನಾಗಿಯೂ, ನಮ್ಮ ದೇವರು ಅತ್ಯಂತ ಕರುಣೆಯಿಂದ ದಯಪಾಲಿಸುವ ಪಾಪ ಪರಿಹಾರವೆಂಬ ರಕ್ಷಣೆಯೆಂಬ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡುವವನಾಗಿಯೂ ಇರುವಿ. ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯ ಉಂಟಾಗಿ..."* **(9)**

"ಈ ಸ್ನಾನಿಕನಾದ ಯೋಹಾನನು (ಯಾಹ್ಯಾ ಅಬ್‌ನ್ ಜಕರಿಯಾ) ಯೆಶಾಯನ ಪ್ರವಾದನಾ ವಾಕ್ಯದಂತೆ, ದೇವದೂತನಾದ ಗಾಬ್ರಿಯೇಲನ ಮಾತಿನಂತೆ, ತನ್ನ

ತಂದೆಯಾದ ಜಕರಿಯನ ಮಾತಿನಂತೆ ಕರ್ತನ ಮುಂದೆ ಹೋಗುವವನಾಗಿದ್ದಾನೆ. ಆ ಬರುವಾತನು ದೇವರು ತಾನೇ ಆಗಿದ್ದಾನೆ".

"ಹೌದು. ನಾನು ಅರ್ಥ ಮಾಡಿಕೊಂಡೆ. ನಾನು ನೆನಸುವಂತೆ ಮೆಸ್ಸೀಯನು ನೇರವಾಗಿ ಬರುವಾಗ ಈ ವಾಕ್ಯ ಸ್ಥಿರವಾಗುತ್ತದೆ".

"ಹೌದು ಇನ್ನೂ ವಿವರವಾಗಿ ಗೊತ್ತಾಗುತ್ತದೆ. ದಾವೀದನೂರಿನ ಬೆತ್ಲೆಹೇಮಿನಲ್ಲಿ ಕನ್ಯಾಮರಿಯಳು ಮೆಸ್ಸೀಯನಿಗೆ ಜನ್ಮವಿತ್ತಾಗ ಕರ್ತನ ದೂತನು ಆ ಊರಿನ ಹೊರಗೆ ಇದ್ದ ಕುರುಬರಿಗೆ ಕಳಿಸಿದ್ದ ಸಂದೇಶ ನೋಡು."

*"ಹೆದರಬೇಡಿರಿ ಕೇಳಿರಿ. ಜನರಿಗೆಲ್ಲಾ ಮಹಾಸಂತೋಷವನ್ನು ಉಂಟು ಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನಂದರೆ ಈ ಹೊತ್ತು ನಿಮಗೋಸ್ಕರ ದಾವೀದನೂರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ."* **(10)**

ಈ ಮೆಸ್ಸೀಯನೆಂದರೆ ಕರ್ತನು ತಾನೇ ಎಂಬ ಸತ್ಯಾಂಶವನ್ನು ಸುವಾರ್ತೆಯು ಪದೇ ಪದೇ ದೃಢಪಡಿಸುತ್ತದೆ. ಆತನು ತಾನೇ ಹೇಳಿದ ಮಾತು.

*"ನಾನೂ ತಂದೆಯೂ ಒಂದಾಗಿದ್ದೇವೆ."* **(11)**. "ನಾನು ಈಗಾಗಲೇ ಮರಿಯಳ ಮಗನಾದ ಯೇಸುವಿನ ಮೇಲೆ ಬಹು ಗೌರವವನ್ನಿಟ್ಟಿದ್ದೆ. ಆದರೆ ಮೊದಲನೇ ಸಾರಿಯಾಗಿ ಮೆಸ್ಸೀಯನಾರೆಂದು ಸಂಪೂರ್ಣ ಚಿತ್ರ ನನಗೆ ಕಾಣಿಸುತ್ತಾ ಇದೆ. ಆತನು ಈ ಲೋಕದಲ್ಲಿ ಹುಟ್ಟಿದ ಕಾರಣವೇನೆಂದು ಅರ್ಥವಾಗುತ್ತಾ ಇದೆ. ನನಗೆ ಈ ಕುರಿತು ವಿವರಿಸಿ ತಿಳಿಸಿ ಹೇಳಲು ನಿನ್ನ ಶ್ರಮ ಸಮಯಗಳನ್ನು ವ್ಯಯ ಮಾಡಿದ್ದಕ್ಕೆ ನಾನು ನಿನಗೆ ವಂದನೆ ತಿಳಿಸುತ್ತೇನೆ ಕಾಸಿಮ್" ಎಂದು ಅಹಮದನು ದೀನ ಭಾವದಿಂದ ಕಾಸಿಮನ ಕೈಗಳನ್ನು ಹಿಡಿದುಕೊಳ್ಳುತ್ತಾನೆ. ಕಾಸಿಮ್ ಗಂಭೀರ ಧ್ವನಿಯಿಂದ "ಅಹಮದ್! ಮೆಸ್ಸೀಯನ ಮೇಲಣ ನಂಬಿಕೆ ಎಂದರೆ ದೇವರು ಕೊಡುವ ಪಾಪ ಪರಿಹಾರ ಮತ್ತು ಎಲ್ಲದರ

ಜತೆಗೆ ನಿತ್ಯಜೀವ. ಈ ಮೆಸ್ಸೀಯನು ಮರಣವನ್ನು ಜಯಿಸಿ ಸತ್ತವರಿಂದ ಎದ್ದು ಬಂದವನು. ಆತನು ಹೇಳುವದನ್ನು ಕೇಳು."

*"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತೀ ಒಬ್ಬನೂ ಎಂದಿಗೂ ಸಾಯುವುದಿಲ್ಲ."* (12)

**ಅಹಮದ್!** ಮೆಸ್ಸೀಯನ ಮೇಲಣ ನಂಬಿಕೆಯಿಂದ ದೇವರ ಬಹುಮಾನವನ್ನು ಹೊಂದಲು ಇಚ್ಛಿಸುತ್ತೀಯಾ?

**ಹೌದು ಸ್ನೇಹಿತನೇ,** ಆತನು ನಿಂತುಕೊಂಡು ಈಗ ನನ್ನ ಬಾಗಿಲನ್ನು ತಟ್ಟುತ್ತಾ ಇದ್ದಾನೆಂಬ ಭಾವನೆ ಬರುತ್ತಾ ಇದೆ ಎನ್ನುತ್ತಾ ಕಣ್ಣಿನಿಂದ ನೀರು ಸುರಿಸುವವನಾಗಿ "ದೇವರ ಆ ಬಹುಮಾನವನ್ನು ಹೇಗೆ ಸ್ವೀಕರಿಸಬೇಕು" ಎಂದು ಕಾತರತೆಯಿಂದ ಕೇಳುತ್ತಾನೆ.

"ಅದು ಕಷ್ಟವೇನಲ್ಲ. ನಿನ್ನ ಸ್ವಂತ ಮಾತಿನಲ್ಲಿ ದೇವರ ಹತ್ತಿರ ಬೇಡಿಕೊ. ಎಲ್ಲವನ್ನೂ ಅರಿಕೆ ಮಾಡು. ಹೇಗೂ ದೇವರಿಗೆ ನಮ್ಮ ಎಲ್ಲಾ ವಿಷಯಗಳೂ ಗೊತ್ತುಂಟಲ್ಲವೇ. ಮೆಸ್ಸೀಯನ ಬಲಿಯಜ್ಞದ ಮೂಲಕ ಆ ಕ್ಷಮಾಪಣೆಯನ್ನು ಸ್ವೀಕರಿಸು. ದೇವರು ನಿನ್ನ ಜೀವಿತಕ್ಕೆ ಆತ್ಮನ ಮೂಲಕ ಪ್ರವೇಶಿಸುವಂತೆ ಪ್ರಾರ್ಥಿಸು ಮತ್ತು ಮೆಸ್ಸೀಯನ ಶಿಷ್ಯನಾಗಿ ಆತನನ್ನು ಹಿಂಬಾಲಿಸು. ಶಕ್ತಿಗಾಗಿ ಬೇಡಿಕೋ. ಮೆಸ್ಸೀಯನ ಹೆಸರಿನಲ್ಲಿ ಈ ಪ್ರಾರ್ಥನೆ ಮಾಡು. ಆತನ ಬಲಿಯಜ್ಞದ ಮೂಲಕ ನಿನಗೂ ತಂದೆಯಾದ ದೇವರಿಗೂ ಮಧ್ಯಸ್ಥಗಾರನಾಗಿದ್ದಾನೆ. ಈ ರೀತಿಯಾಗಿ ಮೆಸ್ಸೀಯನನ್ನು ಅಂಗೀಕರಿಸಿ ನಂಬಿಕೆಯ ಮೂಲಕ ದೇವರ ಬಹುಮಾನ ಪಡೆದುಕೋ. ನಿನ್ನ ಜೀವಿತದಲ್ಲಿ ಒಂದು ಅದ್ಭುತವುಂಟಾಗುತ್ತದೆ. ದೇವರಿಂದ ನೂತನ ಜೀವಿತ ನಿನಗೆ ದೊರಕುತ್ತದೆ. ನೀನು ದೇವರೊಟ್ಟಿಗಿನ ಹೊಸದಾದ ಸಂಬಂಧಕ್ಕೆ ಮೆಸ್ಸೀಯನ ಮುಖಾಂತರ ಪ್ರವೇಶಿಸುತ್ತಿ. ದೇವರು

ನಿನಗೆ ತಂದೆಯಾಗಿ ನೀನು ಮಗುವಾಗುತ್ತಿ. ಮೆಸ್ಸೀಯನನ್ನು ಅಂಗೀಕರಿಸಿದವರ ಕುರಿತು ಸುವಾರ್ತೆಯಲ್ಲಿ ಹೀಗೆ ಬರೆದದೆ."

"*ಯಾರಾರು ಆತನನ್ನು ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.*" **(13)**

ಅವರು ಒಟ್ಟಾಗಿ ಪ್ರಾರ್ಥಿಸಿ ಕರ್ತನಿಗೆ ಉಪಕಾರ ಸ್ತುತಿಮಾಡಿ ಎದ್ದಾಗ ಕಾಸಿಮ್ ದೊಡ್ಡದಾದ ನಗುಮುಖದಿಂದ "ಮೆಸ್ಸೀಯನ ಮೂಲಕವಾಗಿ ಕುಟುಂಬಕ್ಕೆ ಬಂದ ನಿನಗೆ ಸ್ವಾಗತ. ನಾವು ದೇವರ ಅಮೋಘವಾದ ಕುಟುಂಬಕ್ಕೆ ಸೇರಿದ ಅಣ್ಣ ತಮ್ಮಂದಿರು".

ಅಹಮದ್ ಸಂತೋಷದಿಂದ ತುಂಬಿ ತುಳುಕಿದವನಾಗಿ

"ನಾನು ನಿನಗೆ ಹೇಗೆ ಉಪಕಾರ ಹೇಳಲೋ ತಿಳಿಯದಾಗಿದೆ"

"ದೇವರಿಗೆ ಸ್ತೋತ್ರ. ದಿನವೂ ಹೀಗೆ ಹೇಳು. ನಿನ್ನಂತೆ ಮೆಸ್ಸೀಯನನ್ನು ಹಿಂಬಾಲಿಸುವವರೊಟ್ಟಿಗೆ ಸಂಬಂಧವಿಟ್ಟುಕೋ. ಈಗ ಮೆಸ್ಸೀಯನು ತಾನೇ ತನ್ನ ಶಿಷ್ಯರಿಗೆ ಕಲಿಸಿಕೊಟ್ಟು ಪ್ರಾರ್ಥನೆಯನ್ನು ನಿಜ ಅರ್ಥದಲ್ಲಿ ಮಾಡು."

**"ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ.**

**ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು.**

ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದಂತೆ ಕೇಡಿನಿಂದ ನಮ್ಮನ್ನು ತಪ್ಪಿಸು.

ಯಾಕೆಂದರೆ ರಾಜ್ಯವೂ, ಬಲವೂ, ಮಹಿಮೆಯೂ ಸದಾಕಾಲವೂ ನಿನ್ನವೇ. ಆಮೆನ್." (14)

(1) ಮೀಕ 5:2 (2) ಲೂಕ 2:4-7 (3) ಯೋಹಾನ 8:56-58 (4) ಯೆಶಾಯ 9:6-7 (5) ಯೆಶಾಯ 40:3-5 (6) ಯೆಶಾಯ 40:9-11 (7) ಯೋಹಾನ 10:11 (8) ಲೂಕ 1:15-17 (9) ಲೂಕ 1:76-78 (10) ಲೂಕ 2:10-11 (11) ಯೋಹಾನ 10:30 (12) ಯೋಹಾನ 11:25-26 (13) ಯೋಹಾನ 1:12 (14) ಮತ್ತಾಯ 6:9-13.

ನನ್ನ ಪ್ರೀತಿಯ ಗೆಳೆಯಾ,

ನಮ್ಮೊಡನೆ ಅನ್ಯೋನ್ಯತೆಯಲ್ಲಿ ಭಾಗಿಗಳಾಗಲು ನಿನಗೆ ಸ್ವಾಗತಕೋರಿ ಶುಭಾಶಯಗಳನ್ನು ತಿಳಿಸುವವರಾಗಿದ್ದೇವೆ. ನಮ್ಮ ನಿನ್ನ ಸಂಬಂಧವು ದೃಢವಾಗಲು ಹಾಗೂ ಮೆಸ್ಸೀಯನ ಕುರಿತಾದ ನಿಜ ಸತ್ಯವನ್ನು ತಿಳಿದುಕೊಳ್ಳಲು ಸಹಾಯಿಸುವಂತೆ ಪರಮೋನ್ನತ ದೇವರನ್ನು ಬೇಡಿಕೊಳ್ಳುತ್ತೇವೆ.

ಈ ಒಂದು ಚಿಕ್ಕ ಪುಸ್ತಕ 25 ಭಾಷೆಗಳಿಗೂ ಹೆಚ್ಚಾಗಿ ಭಾಷಾಂತರಿ-ಸಲ್ಪಟ್ಟದ್ದಾಗಿದ್ದು ನಿನ್ನ ಈ ಪ್ರಶ್ನಾವಳಿಗಳಿಗೆ ಉತ್ತರಿಸುವ ಮೊದಲು ಸಂಪೂರ್ಣವಾಗಿ ಓದಿ ಈ ಪಾಠಮಾಲಿಕೆಯನ್ನು ನಮಗೆ ದಯವಿಟ್ಟು ಹಿಂತಿರುಗಿಸು. ಈ ಪಾಠಮಾಲಿಕೆಯಲ್ಲಿ ಉಪಯೋಗಿಸಿರುವ ವಾಕ್ಯಗಳು ದೇವರ ವಾಕ್ಯವಾದ ಸತ್ಯವೇದದಿಂದಲೇ ನೇರವಾಗಿ ಆರಿಸಲ್ಪಟ್ಟಿವೆ. ಅದರ ನಿಜವಾದ ಅರ್ಥ ಪೂರ್ತಿ ತಿಳಿಯುವಂತಾಗುವಂತೆ ಈ ವಾಕ್ಯಗಳ ಮೇಲೆ ನಿನ್ನ ಗಮನವಿರಿಸು.

ಈ ಪಾಠ ಮಾಲಿಕೆಯನ್ನು ಕಲಿತಂತ ಅನೇಕ ವಿದ್ಯಾರ್ಥಿಗಳು "ಮೆಸ್ಸಿಯ" ಎಂಬ ವ್ಯಕ್ತಿತ್ವದ ಕುರಿತಾಗಿ ಹೊಸ ಅರ್ಥಗಳನ್ನು ಕಂಡುಕೊಂಡಿದ್ದಾರೆ. ಅವುಗಳು ತಮ್ಮ ಜೀವಿತದಲ್ಲಿ ಬಹು ಆಳವಾದ ಅರ್ಥಗಳನ್ನು ಕೊಟ್ಟಿವೆ. ಒಬ್ಬನೇ ನಿಜದೇವರ ಸಾಮೀಪ್ಯಕ್ಕೆ ಈ ಪಾಠಮಾಲಿಕೆಗಳು ಕೊಂಡೊಯ್ಯುತ್ತವೆಂದು ನಮಗೆ ಸಂಪೂರ್ಣ ನಿಶ್ಚಯವಿದೆ. ಈ ಪಾಠಮಾಲಿಕೆಯನ್ನು ನೀನು ಅಭ್ಯಸಿಸುವಾಗ ನಿನಗೇನಾದರೂ ವೈಯಕ್ತಿಕ ಪ್ರಶ್ನೆಗಳು ಬಂದರೆ ನಿನ್ನ ಉತ್ತರದಲ್ಲಿ ಅದನ್ನು ನಮೂದಿಸಲು ನಿನಗೆ ಸಂಪೂರ್ಣ ಸ್ವಾತಂತ್ರವಿದೆ. ದೇವರು ತನ್ನ ಕೃಪೆಯಿಂದ ತನ್ನ ವಿವೇಕವನ್ನೂ, ಜ್ಞಾನವನ್ನೂ ಈ ಪ್ರಶ್ನೆಗಳಿಗೆ ಉತ್ತರಿಸುವಾಗ ಕೊಡಲೆಂದು ಹಾರೈಸುತ್ತೇವೆ. ನೀನು ದೇವರ ಜತೆ ಪರಿಪೂರ್ಣವಾದ ಪ್ರೀತಿ, ನಂಬಿಕೆ ಮತ್ತು ನಿರೀಕ್ಷೆಗಳ ಜೀವಿತಕ್ಕೆ ಬರಬೇಕೆಂದು ಪ್ರೀತಿಯಿಂದ ಆಹ್ವಾನಿಸುತ್ತೇವೆ.

ದೇವರು ನಿನ್ನನ್ನು ಈ ಅಭ್ಯಾಸದಲ್ಲಿ ಹೆಚ್ಚಿನ ರೀತಿಯಲ್ಲಿ ಆಶೀರ್ವದಿಸಲೆಂದು ನಮ್ಮ ಪ್ರಾರ್ಥನೆ.